ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 15 ಏಪ್ರಿಲ್ 8, 1984 ಬೆಲೆ 60 ಪೈಸೆ

ಕನಿಷ್ಠ ಕೂಲಿ ಜಾರಿಗೆ ಒತ್ತಾಯಿಸಿ ಕಾ. ಸೂರಿಯವರಿಂದ

ಏ. ೯ ರಿಂದ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹ

[ಸರ್ಕಾರವು ಕನಿಷ್ಠ ಕೂಲಿ ಸಲಹಾ ಸಮಿತಿಯ ಶಿಫಾರಸ್ಸುಗಳನ್ನು ಕೂಡಲೇ ಪ್ರಕಟಿಸಬೇಕೆಂದು ಒತ್ತಾಯಿಸಿ ಸಿಪಿಐ(ಎಂ) ಶಾಸಕರೂ, ರಾಜ್ಯ ಸಿಐಟಿಯು ಅಧ್ಯಕ್ಷರೂ ಆಗಿರುವ ಕಾ. ಎಸ್. ಸೂರ್ಯನಾರಾಯಣರಾವ್ ಅವರು ಏಪ್ರಿಲ್ 9 ರಿಂದ ವಿಧಾನ ಸೌಧದ ಎದುರು ಅನಿರ್ದಿಷ್ಟ ಉಪವಾಸ ಮುಷ್ಕರವನ್ನು ಕೈಕೊಳ್ಳುತ್ತಿದ್ದಾರೆ. ಈ ಕುರಿತು ಕಾ. ಸೂರಿಯವರು ನೀಡಿರುವ ಪತ್ರಿಕಾ ಹೇಳಿಕೆಯ ಪೂರ್ಣ ಪಾಠವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.]

ಕರ್ನಾಟಕ ರಾಜ್ಯ ಸರ್ಕಾರ 26 ಕೈಗಾರಿಕೆಗಳಿಗೆ ಕರಡು ಕನಿಷ್ಠ ಕೂಲಿಯನ್ನು ಪ್ರಕಟಿಸಿ ಅವುಗಳನ್ನು ಸೆಪ್ಟಂಬರ್ ಮತ್ತು ಅಕ್ಟೋಬರ್ 81 ರಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದೆಂದು ಹೇಳಿತು. ಕನಿಷ್ಠ ಕೂಲಿಯ ಅಂತಿಮ ಪ್ರಕಟಣೆಯನ್ನು 82 ರಲ್ಲಿ ಪ್ರಕಟಿಸಿತು. ಇದರವಿರುದ್ಧ ಮಾಲೀಕರುಗಳು ಹೈಕೋರ್ಟಿಗೆ ರಿಟ್ ಅರ್ಜಿ ಸಲ್ಲಿಸಿದರು. ನ್ಯಾಯಮೂರ್ತಿ ಬೋಪಣ್ಣನವರು ಕನಿಷ್ಠ ಕೂಲಿ ಸಲಹಾ-ಸಮಿತಿಗೆ ಮಂತ್ರಿಗಳು ಅಧ್ಯಕ್ಷರಾಗಿರಬಾರದೆಂದು, ಕಾರ್ಮಿಕರು ಅಥವಾ ಮಾಲೀಕರ ಪ್ರತಿನಿಧಿಗಳನ್ನು ಬಿಟ್ಟು, ಸ್ವತಂತ್ರ ಪ್ರತಿನಿಧಿಗಳು ಅಧ್ಯಕ್ಷರಾಗಿರಬೇಕೆಂದು ತೀರ್ಪಿತ್ತರು. ಅದರ ಪ್ರಕಾರ 1983 ರ ಆಸವಿಯಲ್ಲಿ ಕನಿಷ್ಠ ಕೂಲಿಯನ್ನು ನೇಮಿಸಿ 26 ಉದ್ಯಮಗಳಿಂದ ಬಂದ ತಕರಾರುಗಳನ್ನು ಗಣನೆಗೆ ತೆಗೆದುಕೊಂಡ ಕನಿಷ್ಠ ಕೂಲಿ ಶಿಫಾರಸ್ಸುಗಳನ್ನು ನೀಡಿತ್ತು.

ಕನಿಷ್ಠ ಕೂಲಿ ಸಲಹಾ ಸಮಿತಿಯ 21 ಜನ ಸದಸ್ಯರಲ್ಲಿ 7 ಜನ ಮಾಲೀಕರ ಪ್ರತಿನಿಧಿಗಳು, 7 ಜನ ಕಾರ್ಮಿಕ ಸಂಘಗಳ ಪ್ರತಿನಿಧಿಗಳು, ಇನ್ನೂ 7 ಜನ ಸ್ವತಂತ್ರರು ಇದ್ದಾರೆ. ಈ ಸಲಹಾ ಸಮಿತಿ 26 ಕೈಗಾರಿಕೆಗಳಲ್ಲಿ ಕನಿಷ್ಠ ಕೂಲಿ ನಿರ್ಣಯಿಸಿ ಮೊದಲ ಬಾರಿಗೆ ಈ ಉದ್ಯಮಗಳಲ್ಲಿ ತುಟ್ಟಿಭತ್ಯೆಯನ್ನು ಬೆಲೆ ಸೂಚ್ಯಾಂಕದ ಆಧಾರದ ಮೇಲೆ ಕೊಡಬೇಕೆಂದು ನಿಗದಿಮಾಡಿದೆ. ಮಾಲೀಕರ ಪ್ರತಿನಿಧಿಗಳು ಈ ಉದ್ಯಮಗಳಲ್ಲಿ ತುಟ್ಟಿಭತ್ಯೆ ಬೆಲೆ ಸೂಚ್ಯಾಂಕಕ್ಕೆ ಲಗತ್ತು ಮಾಡಬಾರದೆಂಬ ನಿಲುವನ್ನು ತೆಗೆದುಕೊಂಡಿದ್ದಾರೆ. ಆದರೆ ಕಾರ್ಮಿಕರು ಮತ್ತು ಸ್ವತಂತ್ರ ಪ್ರತಿನಿಧಿಗಳು ತುಟ್ಟಿಭತ್ಯೆಯನ್ನು ಬೆಲೆ ಸೂಚ್ಯಾಂಕಕ್ಕೆ ಲಗತ್ತು ಮಾಡಿ ನಿಜವೇತನದಲ್ಲಿ ಆಗುವ ಕಡಿತವನ್ನು ಸ್ವಲ್ಪವಾದರೂ ಕಡಿಮೆ ಮಾಡಬೇಕೆಂದು ಅಭಿಪ್ರಾಯಪಟ್ಟರು. ಆದುದರಿಂದ ಕನಿಷ್ಠ ವೇತನ ಸಲಹಾ ಸಮಿತಿ ಬಹುಮತದಿಂದ ತುಟ್ಟಿಭತ್ಯೆಯನ್ನು ಬೆಲೆ ಸೂಚ್ಯಾಂಕವನ್ನು ಲಗತ್ತಿಸಬೇಕೆಂಬ ಸೂಚನೆಯನ್ನು ಒಪ್ಪಿ ಸರ್ಕಾರಕ್ಕೆ ತನ್ನ ನಿರ್ಣಯವನ್ನು ಕಳುಹಿಸಿದೆ. ಈಗಾಗಲೇ ಬೀಡಿ ಉದ್ಯಮದಲ್ಲಿ ಈ ತುಟ್ಟಿಭತ್ಯೆ ಜಾರಿಗೆ ಬಂದಿದೆ. ಕನಿಷ್ಠ ಕೂಲಿ ತುಟ್ಟಿಭತ್ಯೆ ಸೇರಿ ಜಾರಿಯಾಗಬೇಕೆಂದು ಸದನದಲ್ಲಿ ಅನೇಕರು -ನಾನೂ ಸೇರಿ- ಒತ್ತಾಯ ಮಾಡಿದ್ದಾರೆ. ಕಾರ್ಮಿಕ ಇಲಾಖೆಯ ಬೇಡಿಕೆಗೆ ಉತ್ತರ ಕೊಡುತ್ತಾ ಮಾನ್ಯ ಮಂತ್ರಿ ಲಕ್ಷ್ಮೀಸಾಗರ್‌ರವರು ಕನಿಷ್ಠ ಕೂಲಿಯನ್ನು ಶೀಘ್ರದಲ್ಲಿ ಪ್ರಕಟಿಸುವುದಾಗಿ ತಿಳಿಸಿದರು. ದಿನಾಂಕ. 14-3-84 ರಂದು ರಾಜ್ಯದಾದ್ಯಂತ ಸಿಐಟಿಯು ಸಂಘಗಳು ಕನಿಷ್ಠ ಕೂಲಿ ಪ್ರಕಟಣೆಯಾಗಿ ಜಾರಿಗೆ ಬರಬೇಕೆಂದು ಮೆರವಣಿಗೆ, ಪಿಕೆಟಿಂಗ್, ಧರಣಿ ನಡೆಸಿದವು. ಆದರೆ ಸರ್ಕಾರ ಇದನ್ನು ಪ್ರಕಟಿಸುವುದರಲ್ಲಿ ಮೀನ-ಮೇಷ ಮಾಡುತ್ತಿದೆ. ಬಹುಶಃ ಮಾಲೀಕರ ಮತ್ತು ಜಮೀನುದಾರರ ಒತ್ತಡಗಳು ಕಾರಣವಿರಬಹುದು.

ನಮ್ಮ ರಾಜ್ಯದಲ್ಲಿ ಸುಮಾರು 40-50 ಲಕ್ಷ ಕೃಷಿ ಕಾರ್ಮಿಕರು ಇರಬಹುದು. ಇದರಲ್ಲಿ ಖುಷ್ಕಿಗೆ 10 ರೂ, ತರಿ ಜಮೀನಿಗೆ 12 ರೂ, ಭಾಗಾಯಿತಿಗೆ 14 ರೂ. ಎಂದು ನಿಗದಿ ಮಾಡಿದೆ. ಸರ್ಕಾರದ ಕರಡು ಪ್ರಕಟಣೆಯಲ್ಲಿ ಕೃಷಿ ಕಾರ್ಮಿಕರಿಗೆ ತುಟ್ಟಿಭತ್ಯೆಯನ್ನು ಸೇರಿಸಿತಲ್ಲ, ಆದ್ದರಿಂದ ಸಲಹಾ ಸಮಿತಿ ಕನಿಷ್ಠ ಕೂಲಿ ಕಾಯಿದೆ ಪ್ರಕಾರ ಕೃಷಿ ಕಾರ್ಮಿಕರಿಗೂ ತುಟ್ಟಿಭತ್ಯೆ ಸಿಗಬೇಕೆಂಬ ಅಂಶವನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಗಲಿಲ್ಲ.

ಕನಿಷ್ಠ ಕೂಲಿ ಪ್ರಕಟಣೆಯಲ್ಲಿ ಒಂದು ದಿನ ತಡವಾದರೂ ಸಹಾ ಕಾರ್ಮಿಕರಿಗೆ, ಕೃಷಿ ಕಾರ್ಮಿಕರಿಗೆ ಲಕ್ಷಾಂತರ ರೂಪಾಯಿ ನಷ್ಟವಾಗುತ್ತದೆ. ಆದ್ದರಿಂದ ಸರ್ಕಾರ ಕನಿಷ್ಠ ಕೂಲಿ ಸಲಹಾ ಸಮಿತಿಯ ಶಿಫಾರಸ್ಸುಗಳನ್ನು ಕೂಡಲೇ ಪ್ರಕಟಿಸಬೇಕೆಂದು ಸಿಐಟಿಯು ಅಭಿಪ್ರಾಯ ಪಡುತ್ತದೆ. ದಿನಾಂಕ 9-4-84 ರ ಒಳಗೆ ಸರ್ಕಾರ ಕನಿಷ್ಠ ಕೂಲಿ ಪ್ರಕಟಣೆ ಮಾಡದಿದ್ದರೆ ಲಕ್ಷಾಂತರ ಕಾರ್ಮಿಕರ ಹಿತವನ್ನು ರಕ್ಷಿಸಲು ನಾನು ದಿನಾಂಕ: 9-4-84 ರ ಸಂಜೆ 5 ಗಂಟೆಯಿಂದ ವಿಧಾನ ಸೌಧದ ಎದುರು ಅನಿರ್ದಿಷ್ಟ ಕಾಲ ಉಪವಾಸ ಮುಷ್ಕರ ಕೈಗೊಳ್ಳುವುದು ಅನಿವಾರ್ಯವಾಗುತ್ತದೆ. ಸರ್ಕಾರ

(8ನೇ ಪುಟ ನೋಡಿ)

ರೈತರ ಸಮಸ್ಯೆಗಳನ್ನು ಕಡೆಗಣಿಸಿದರೆ ಹೋರಾಟ ಅನಿವಾರ್ಯ

ಕರ್ನಾಟಕ ಪ್ರಾಂತ ರೈತ ಸಂಘ

ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ರೈತ ಚಳುವಳಿಯು ವ್ಯಾಪಕವಾಗಿ ಬೆಳೆದು ಬಂದಿದೆ. ಹಲವಾರು ಮಂದಿಯ ಜೀವಗಳನ್ನು ಬಲಿತೆಗೆದು ಕೊಂಡಿದ್ದ ಗುಂಡೂರಾವ್ ನೇತೃತ್ವದ ಕಾಂಗ್ರೆಸ್ ಪಕ್ಷದ ಸರಕಾರವನ್ನು ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಸೋಲಿಸಿ ರಾಜ್ಯದಲ್ಲಿ ಜನತಾ ಪಕ್ಷದ ಸರಕಾರವು ಅಸ್ತಿತ್ವಕ್ಕೆ ಬರುವಂತೆ ಮಾಡುವುದರಲ್ಲಿ ರಾಜ್ಯದ ರೈತರ ಮತ್ತು ಹಳ್ಳಿಯ ಬಡವರದ್ದು ಬಹಳ ಮಹತ್ವದ ಪಾತ್ರವಿತ್ತು. ಇಂದು ಹೆಗ್ಡೆ ಚಲೇ ಜಾವೋ ಎಂದು ಬೊಬ್ಬಿಡುತ್ತಿದ್ದು, ರೈತರನ್ನು ತಪ್ಪು ದಾರಿಗೆಳೆಯುತ್ತಿರುವ ಎಚ್. ಎಸ್. ರುದ್ರಪ್ಪನವರ ನೇತೃತ್ವದ ಕರ್ನಾಟಕ ರಾಜ್ಯ ರೈತ ಸಂಘ ಅಂದು, ಅಂದರೆ ಕಳೆದ ವಿಧಾನಸಭಾ ಚುನಾವಣೆಯ ವೇಳೆ, ತಟಸ್ಥ ಧೋರಣೆಯನ್ನು ತಳೆದು ಕಾಂಗ್ರೆಸ್‌ಗೇ ಅನುಕೂಲ ಮಾಡಿಕೊಟ್ಟಿತ್ತು.

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಬೆಂಬಲದಿಂದ ಕಾಂಗ್ರೆಸ್ಸನ್ನು ಸೋಲಿಸಿ ಅಧಿಕಾರಕ್ಕೆ ಬಂದಿರುವ ಜನತಾ ಪಕ್ಷದ ಸರಕಾರವನ್ನು ಅಧಿಕಾರದಿಂದ ಇಳಿಸುವ ಘೋಷಣೆಯನ್ನು ಇದೀಗ ಕರ್ನಾಟಕ ರಾಜ್ಯ ರೈತ ಸಂಘವು ಕೊಡುತ್ತಿರುವುದರಿಂದ, ಮತ್ತೆ ಹೇಗಾದರೂ ಅಧಿಕಾರಕ್ಕೆ ಬರಲು ಪ್ರಯತ್ನಿಸುವ ಕಾಂಗ್ರೆಸ್ಸಿನ ಕುತಂತ್ರಗಳಿಗೆ ಪ್ರೋತ್ಸಾಹ ದೊರೆಯುತ್ತದೆ.

ರೈತ ವಿರೋಧಿ ಗುಂಡೂರಾವ್ ಸರಕಾರವನ್ನು ಅಧಿಕಾರದಿಂದ ಕೆಳಗಿಳಿಸಿ, ರಾಜ್ಯದಲ್ಲಿ ಜನತಾ ಪಕ್ಷದ ಸರಕಾರವು ಅಸ್ತಿತ್ವಕ್ಕೆ ಬರುವಂತೆ ಮಾಡುವುದರಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ್ದು ಮಹತ್ವದ ಪಾತ್ರವಿದೆ. ತಾನಿರುವ ಜಿಲ್ಲೆಗಳಲ್ಲಿ ಕರ್ನಾಟಕ ಪ್ರಾಂತ ರೈತ ಸಂಘವು ಕಾಂಗ್ರೆಸ್ಸನ್ನು ಸೋಲಿಸಲು ಸಕ್ರಿಯವಾಗಿ ದುಡಿದಿತ್ತು. ಇತ್ತೀಚೆಗೆ ರುದ್ರಪ್ಪನವರ ನೇತೃತ್ವದ ಕರ್ನಾಟಕ ರಾಜ್ಯ ರೈತ ಸಂಘವು ರೈತರನ್ನು ತಪ್ಪು ದಾರಿಗೆಳೆಯಲು ಪ್ರಯತ್ನಿಸಿದಾಗಲೂ ಕರ್ನಾಟಕ ಪ್ರಾಂತ ರೈತ ಸಂಘವು ಅದನ್ನು ಬಹಿರಂಗವಾಗಿ ವಿರೋಧಿಸಿದೆ. ರೈತರ ಮತ್ತು ಹಳ್ಳಿಯ ಬಡವರ ಬೆಂಬಲದಿಂದ ಅಧಿಕಾರಕ್ಕೆ ಬಂದಿರುವ ಜನತಾ ಪಕ್ಷದ ಸರಕಾರವು ಕಳೆದ ಒಂದೂ ಕಾಲು ವರ್ಷದಲ್ಲಿ ರೈತರಿಗೂ, ಹಳ್ಳಿಯ ಬಡವರಿಗೂ ಸಂಬಂಧಿಸಿದ ಮುಖ್ಯ ಪ್ರಶ್ನೆಗಳ ಬಗ್ಗೆ ಸ್ಪಷ್ಟ ಹಾಗೂ ನಿರ್ದಿಷ್ಟ ತೀರ್ಮಾನಗಳನ್ನು ಧೈರ್ಯವಾಗಿ ತೆಗೆದುಕೊಳ್ಳಲು ಮುಂದಾಗಿಲ್ಲ. ರಾಜ್ಯದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘವೂ ಸೇರಿದಂತೆ ಬೇರೆ ಬೇರೆ ರೈತ ಸಂಘಗಳಿರುವುವಾದರೂ ಸರಕಾರವು ರುದ್ರಪ್ಪನವರ ನೇತೃತ್ವದ ರೈತ ಸಂಘಕ್ಕೇ ಒತ್ತು ಮತ್ತು ಮಹತ್ವ ಕೊಡುತ್ತಾ ಬಂದಿರುವುದರ ಪರಿಣಾಮವನ್ನು ಸರಕಾರವೇ ಎದುರಿಸುವಂತಾಯಿತು. ಆದರೆ ಇದೀಗ ಜನತಾ ಪಕ್ಷದ ಸರಕಾರವು ಈ ವಿಚಾರದಲ್ಲಿ ತನ್ನ ತಪ್ಪನ್ನು ತಿದ್ದಿಕೊಂಡು, ರಾಜ್ಯದಲ್ಲಿರುವ ಪ್ರಮುಖ ರೈತ ಸಂಘಗಳೊಂದಿಗೆ ಜಂಟಿಯಾಗಿ ಮಾತುಕತೆ ನಡೆಸಲು ಮುಂದಾಗಿದೆ. ತಾರೀಖು 6-4-84 ರಂದು ಎಲ್ಲ ರೈತ ಸಂಘಗಳ ಪ್ರತಿನಿಧಿಗಳನ್ನು ಮಾತುಕತೆಗೆ ಕರೆಯಲಾಗಿದೆ. ಮೊದಲಿನಿಂದಲೂ ಸಂಯುಕ್ತ ಚಳವಳಿಗೆ ವಿರೋಧವಿದ್ದು, ಬೇರೆಯವರೊಂದಿಗೆ ಮಾತುಕತೆ ನಡೆಸುವುದಕ್ಕೂ ವಿರೋಧ ಹೇಳುತ್ತಾ ಬಂದಿರುವ ರುದ್ರಪ್ಪನವರ ನೇತೃತ್ವದ ರೈತ ಸಂಘವು ಮುಖ್ಯಮಂತ್ರಿಯವರು ಕರೆದಿರುವ ಮಾತುಕತೆಯಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿದೆ. ರುದ್ರಪ್ಪನವರ ನೇತೃತ್ವದ ಕರ್ನಾಟಕದ ರಾಜ್ಯ ರೈತ ಸಂಘದ ಬಣ್ಣ ಈಗ ಬಯಲಾಗಿದೆ.

ರಾಜ್ಯ ಸರಕಾರದ ಇತಿ ಮಿತಿಯೊಳಗೆ ಸಾಧ್ಯವಿರುವುದನ್ನೆಲ್ಲಾ ರೈತರಿಗೆ, ಹಳ್ಳಿಯ ಬಡವರಿಗೂ ದೊರಕಿಸಿಕೊಡಲು ರಾಜ್ಯ ಸರಕಾರದ ಮೇಲೆ ಒತ್ತಾಯಿಸುವುದು ಮತ್ತು ರಾಜ್ಯ ಸರಕಾರದ ಬೆಂಬಲವನ್ನೂ ಪಡೆದು ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಕೇಂದ್ರ ಸರಕಾರದ ಮೇಲೆ ಒತ್ತಾಯ ತರುವುದೂ ಅವಶ್ಯ ಎಂದು ಕರ್ನಾಟಕ ಪ್ರಾಂತ ರೈತ ಸಂಘವು ನಂಬುತ್ತದೆ. ಇದನ್ನು ಸಂಯುಕ್ತ ಚಳವಳಿಗಳ ಮೂಲಕ ನಡೆಸಲೂ ಎಲ್ಲಾ ರೈತ ಸಂಘಗಳಿಗೆ ಕರ್ನಾಟಕ ಪ್ರಾಂತ ರೈತ ಸಂಘ ಕರೆ ಕೊಡುತ್ತಾ ಬಂದಿದೆ.

ಸಾಲದ ಮರು ಪಾವತಿಯ ಮಾಯಿದೆ, ಬಡ್ಡಿ ದರ ಮೊದಲಾದ ವಿಚಾರಗಳಲ್ಲಿ ರಾಜ್ಯದಲ್ಲಿ ಅಧಿಕಾರದಲ್ಲಿರುವ ಜನತಾ ಸರಕಾರವು ಅಲ್ಪಸ್ವಲ್ಪ ಪರಿಹಾರ ಒದಗಿಸಿಕೊಟ್ಟಿರುವುದಾದರೂ, ಮೂಲಭೂತ ಪ್ರಶ್ನೆಗಳ ಬಗ್ಗೆ ಗಂಭೀರವಾಗಿ ಯೋಚಿಸುತ್ತಿದ್ದಂತಿಲ್ಲ. ಬಡಜನರ ಸ್ವಾಧೀನವಿರುವ ಸರಕಾರಿ ಭೂಮಿಯನ್ನು ಖಾಯಂಗೊಳಿಸುವುದು, ಕೃಷಿ ಕೂಲಿಗಾರರಿಗೆ ನ್ಯಾಯವಾದ ವೇತನ ನಿಗದಿ ಮಾಡುವುದು, ಕೃಷಿ ಉತ್ಪನ್ನಗಳಿಗೆ ಬೆಂಬಲಿತ ಬೆಲೆ ದೊರಕಿಸುವಲ್ಲಿ ಪ್ರಯತ್ನ, ನೀರಾವರಿ ಕೆಲಸಗಳನ್ನು ತ್ವರಿತ ಗೊಳಿಸುವುದು, ಬರಗಾಲ ಪ್ರದೇಶಗಳಲ್ಲಿ ಶಾಶ್ವತ ಪರಿಹಾರ ಯೋಜನೆ ಹೀಗೆ ಹಲವು ಪ್ರಶ್ನೆಗಳ ಬಗ್ಗೆ ಸರಕಾರವು ಸ್ಪಷ್ಟವಾಗಿ ತೀರ್ಮಾನಗಳನ್ನು ಮಾಡುತ್ತಿಲ್ಲ. ಒತ್ತುವರಿ ಭೂಮಿಯನ್ನು ಖಾಯಂ ಗೊಳಿಸುವುದಾಗಿ ಹೇಳಿ ಆರು ತಿಂಗಳುಗಳಾದರೂ

(8ನೇ ಪುಟ ನೋಡಿ)

ಬೆಲೆಯೇರಿಕೆ, ನಿರುದ್ಯೋಗ, ಕಾರ್ಖಾನೆಗಳ ಮುಚ್ಚುವಿಕೆ, ಲೇ-ಆಫ್ ಇತ್ಯಾದಿಗಳನ್ನು ವಿರೋಧಿಸಿ ಏ 18 ರಂದು ದೆಹಲಿಯಲ್ಲಿ ನಡೆಯುವ ಪಾರ್ಲಿಮೆಂಟ್ ಚಲೋ ಕಾರ್ಯಕ್ರಮಕ್ಕೆ ಮುನ್ನಡೆಯಿರಿ.

—ಎನ್ಕೆ

ಭಾರತ ದರ್ಶನ

ಸರಕಾರದ ವಿಭಿನ್ನ ನಾಲಿಗೆಗಳು

ಜೀವನಾವಶ್ಯಕ ಸೂಚ್ಯಾಂಕದ ವಿಷಯದಲ್ಲಿ ತಪ್ಪು ಅಂಕೆಸಂಖ್ಯೆ ಕೊಟ್ಟು ದೇಶದ ಲಕ್ಷಾವಧಿ ಕಾರ್ಮಿಕರಿಗೆ ಸರಕಾರ ತುಟ್ಟಿಭತ್ತೆ ನೀಡುವಲ್ಲಿ ಮೋಸ ಮಾಡಿ ಗುತ್ತೇದಾರಿಗಳಿಗೆ ಲಾಭ ಮಾಡುತ್ತಿದೆಂದು ಕಾರ್ಮಿಕರ ಕೇಂದ್ರ ಸಂಘಟನೆ ಸಿಐಟಿಯು ಆಕ್ಷೇಪಿಸುತ್ತ ಬಂದಿದೆ. ಹಾಗೆಯೇ ಆಹಾರಧಾನ್ಯ ಉತ್ಪಾದನೆ, ವಿತರಣೆಯ ವಿಷಯದಲ್ಲಿಯೂ ಜನರಿಗೆ ತಪ್ಪಾದ ಮಾಹಿತಿ ಕೊಟ್ಟು ವಿದೇಶಿ ಬಂಡವಲದಾರರ ಲಾಭಕ್ಕಾಗಿ ಆಹಾರ ಧಾನ್ಯ ಆಮದು ಮಾಡಿ ಅದರ ಹೊರೆಯನ್ನು ಬಡಜನರ ಮೇಲೆ ಹೇರುತ್ತಿದೆಂದೂ ಸಿಪಿಐ(ಎಂ) ತಕರಾರು ಮಾಡುತ್ತಲೇ ಇದೆ.

ಕೋಟ್ಯಾವಧಿ ರೂಪಾಯಿ ಹಣ ದೇಶದ ಯೋಜನೆಗಳಿಗಾಗಿ ಖರ್ಚು ಮಾಡುತ್ತಿರುವ ಇಂದಿರಾ ಸರಕಾರದ ಆಡಳಿತ ಯಾವ ರಂಗದಲ್ಲಿಯೂ ನಿಶ್ಚಿತ ಅಂಕೆ ಸಂಖ್ಯೆಗಳನ್ನು ಸರಿಯಾಗಿ ಕೂಡಿ ಹಾಕಿದಂತೆ ಕಂಡು ಬರುವುದಿಲ್ಲ. ಪ್ರತಿಯೊಂದರಲ್ಲಿಯೂ ಬರೇ ಮೋಸ, ಸರಕಾರ ಮಂತ್ರಿಗಳಿಗೂ ಸರಿಯಾದ ಮಾಹಿತಿ ಒದಗಿಸುತ್ತಿಲ್ಲ. ಕಾರಣ ಮಂತ್ರಿಗಳ ಹೇಳಿಕೆಗಳೆಲ್ಲ ಸತ್ಯಕ್ಕೆ ದೂರವೆಂದು ತಿಳಿಯಲೇ ಬೇಕಾಗಿದೆ.

ಲೋಕ ಸಭೆಯಲ್ಲಿ ಆರ್. ಆರ್. ಮೊರಾರ್ಕಾ ಅವರು ದೇಶದಲ್ಲಿ ಬಡತನದ ರೇಖೆಯ ಕೆಳಗಿರುವ ಜನಸಂಖ್ಯೆ ಎಷ್ಟೆಂದು ಪ್ರಶ್ನೆ ಕೇಳಿದಾಗ ಯೋಜನಾ ಮಂತ್ರಿ ಎಸ್. ಬಿ. ಚವಾಣ್ ಅವರು 1977-78 ರಲ್ಲಿ 291·9 ಮಿಲಿಯ ಜನರಿದರೆಂದು ಹೇಳಿದರು. ಅತುಲ ಬಿಹಾರಿ ಬಾಜಪೆ ಮತ್ತು ರಾಮ ವಿಲಾಸ ಪಾಸ್ವಾನ್ ಕೇಳಿದ ಪ್ರಶ್ನೆಗೆ ಅದೇ ಮಂತ್ರಿಯವರು 305 ಮಿಲಿಯ ಜನರಿದ್ದಾರೆಂದು ತಿಳಿಸಿದರು. ಇದಕ್ಕಿಂತ ಮುಂಚಿತವಾಗಿ ಜಗತೀಶ ಜಾನಿಯವರು ಕೇಳಿದ ಪ್ರಶ್ನೆಗೆ ಬೇರೆ ಬೇರೆ ರಾಜ್ಯಗಳ ಅಂಕೆ ಒದಗಿಸಿದ್ದು ಅದನ್ನೆಲ್ಲ ಕೂಡಿಸುವಾಗ ಒಟ್ಟು ಸಂಖ್ಯೆ 306·6 ಮಿಲಿಯ ಆಗುತ್ತದೆ.

ಹಾಗಾದರೆ ನಿಜವಾದ ಸಂಖ್ಯೆ ಯಾವುದು? ಯೋಜನಾ ಮಂತ್ರಿಯವರ ಗನುಸಾರವಾಗಿ 78-79 ರಲ್ಲಿ 339 ಮಿಲಿಯ, 1981-82 ರಲ್ಲಿ 282 ಮಿಲಿಯ ಬಡ ಜನರಿದ್ದರು. ಈ ಕಾಲ ಘಟ್ಟದಲ್ಲಿ 57 ಮಿಲಿಯ ಬಡ ಜನರನ್ನು ಸರಕಾರ ಮೇಲೆತ್ತಿತೆಂದರ್ಥ. ಹೀಗಿರುವಾಗ ಇತ್ತೀಚೆಗೆ ಪ್ರಧಾನ ಮಂತ್ರಿಯವರು ...... ರೇಡಿಯೋದಲ್ಲಿ ಭಾಷಣ ಮಾಡುತ್ತ 120 ಮಿಲಿಯ ಬಡವರನ್ನು ಬಡತನದ ರೇಖೆಯಿಂದ ಮೇಲೆತ್ತಿದ್ದೇವೆಂದು ಹೇಳಿದ್ದರ ಅರ್ಥ ವೇನು ?

ಲೋಕ ಸಭೆಯಲ್ಲಿ ಇದರ ಕುರಿತು ವಿಚಾರಿಸಿದಾಗ, ಪ್ರಧಾನ ಮಂತ್ರಿಯವರ ಲೆಕ್ಕ ಬಹುತೇಕ ಇಡೀ 6 ನೇ ಯೋಜನೆಯ ಕಾಲಾವಧಿಯದ್ದಾಗಿರಬೇಕೆಂದು ಯೋಜನಾ ಮಂತ್ರಿ ಉತ್ತರಿಸಿದರು. ಇದಕ್ಕೆ ಸಮರ್ಪಕವಾದ ಉತ್ತರ ಯೋಜನಾ ಆಯೋಗದ ಕಚೇರಿಯಲ್ಲೂ ಸಿಗಲಿಲ್ಲ. ಬಡವರ ಸಂಖ್ಯೆಯೇ ಗೊತ್ತಿಲ್ಲದಿರುವಾಗ ಯೋಜನೆಗಳ ಪಾಡೇನು ? 36 ವರ್ಷಗಳ ಕಾಂಗ್ರೆಸ್ ಆಡಳಿತೆಯ ವೈಖರಿ ಇದಲ್ಲವೇ ?

ಹೊಸ ರಾಜಕೀಯ ಶಕ್ತಿ ಮೂಡಿ ಬರುತ್ತಿದೆ

ಮುಂಬಯಿಯಲ್ಲಿ ಸಮಾವೇಶಗೊಂಡ 8 ವಿರೋಧ ಪಕ್ಷಗಳ ಮಹಾರಾಷ್ಟ್ರ ರಾಜ್ಯದ ರಾಜಕೀಯ ಸಮಾವೇಶದಲ್ಲಿ ಭಾಷಣ ಮಾಡುತ್ತ, ಕಾಂಗ್ರೆಯೇತರ ರಾಜ್ಯಗಳ ಮುಖ್ಯಮಂತ್ರಿಗಳ ಮತ್ತು ವಿರೋಧ ಪಕ್ಷಗಳ ನಾಲ್ಕು ಸಭೆ, ಇಂದಿರಾ ಕಾಂಗ್ರೆಸ್ಸಿನ ಜನ ವಿರೋಧಿ ಸರಕಾರಕ್ಕೆ ಪ್ರತಿಯಾಗಿ ದೇಶದಲ್ಲಿ ಹೊಸ ರಾಜಕೀಯ ಶಕ್ತಿಯೊಂದಕ್ಕೆ ಜನ್ಮವಿತ್ತಿದೆಂದೂ, ಎಡ ಪಕ್ಷಗಳ ಈ ಐಕ್ಯತೆ ಬರೇ ಚುನಾವಣೆಯ ಸಲುವಾಗಿಯಲ್ಲೆಂದೂ, ಒಂದು ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ಅಂಥ ಐಕ್ಯತೆಯನ್ನು ಸಾಧಿಸಲಾಗಿದೆಂದೂ ಹೇಳಿದ್ದಾರೆ. ಆ ಕಾರ್ಯಕ್ರಮವನ್ನು ಜನರ ಮಧ್ಯೆ ಪ್ರಚಾರ ಮಾಡಿ ಹೋರಾಟ ಮಾಡುವ ಅವಶ್ಯಕತೆಯನ್ನು ಎತ್ತಿ ತೋರಿಸಿದ್ದಾರೆ.

ಜನತಾ ಪಕ್ಷದ ಪಟ್ನಾ ಸಮ್ಮೇಳನ ಕೂಡ ವಿರೋಧ ಪಕ್ಷಗಳ ಐಕ್ಯತೆಗೆ ಕರೆ ಕೊಟ್ಟಿದೆ. ರಾಜಕೀಯ ಮುಖಂಡರಿಗಾಗಿ ಈ ಐಕ್ಯತೆಯಲ್ಲ, ಅದು ಜನರಿಗಾಗಿ ಎಂದು ಹಿರಿಯ ರಾಜಕಾರಣಿ ನಿಜಲಿಂಗಪ್ಪನವರು ದಿಲ್ಲಿ ಪತ್ರಿಕಾ ಪರಿಷತ್ತಿನಲ್ಲಿ ಹೇಳಿದ್ದಾರೆ. ಬಿಜೆಪಿ, ಲೋಕದಳಗಳನ್ನೊಳಗೊಂಡ ಕಮ್ಯೂನಿಸ್ಟೇತರ ಪಕ್ಷಗಳ ಐಕ್ಯತೆ ಸಾಧಿಸಲು ನಿಜಲಿಂಗಪ್ಪ ಹೊರಟಿದ್ದಾರೆ.

ಈ ಬಂಡವಾಳಶಾಹಿ ಮುಖಂಡರು ಚರಿತ್ರೆಯಿಂದ ಏನೂ ಅನುಭವ ಪಡೆಯುತ್ತಿಲ್ಲ. 1977 ರಲ್ಲಿ ಇಂದು ನಿಜಲಿಂಗಪ್ಪ ಹೇಳುವ ರೀತಿಯಲ್ಲಿಯೇ ಜನತಾ ಪಕ್ಷ ಉದಯವಾಗಿತ್ತು. ಜನಸಂಘದೊಡನೆ ಆರ್. ಎಸ್. ಎಸ್. ಸಂಬಂಧದ ಕುರಿತು ಅವರಲ್ಲಿ ಜಗಳವಾಯಿತು. ಚರಣಸಿಂಗ್‌ರ ಅಧಿಕಾರ ಲಾಲಸೆ ಜನತಾ ಪಕ್ಷವನ್ನು ಒಡೆದು ಮೊರಾರ್ಜಿ ಸರಕಾರ ಉರುಳುವಂತೆ ಮಾಡಿತು. ಈಗ ಲೋಕದಳ-ಬಿಜೆಪಿ ರಾಷ್ಟ್ರೀಯ ಪ್ರಜಾಪ್ರಭುತ್ವ ಒಕ್ಕೂಟ ರಚಿಸಿಕೊಂಡು ಚುನಾವಣೆ ನಡೆಸಿದರೂ ಕೂಡ ತಮ್ಮ ಬಲವನ್ನು ಉಳಿಸಿಕೊಳ್ಳಲಿಕ್ಕಾಗಲಿಲ್ಲ. ಅದೇ ಗತಿಯನ್ನು ಜನತಾ, ಬಹುಗುಣ-ಶರದ್ ಪವಾರ ಪಕ್ಷಗಳು ಎದುರಿಸಬೇಕಾಯಿತು. ಅದೇ ಸಮಯದಲ್ಲಿ ಸಿಪಿಐ (ಎಂ), ಸಿಪಿಐ., ಫಾರ್ವರ್ಡ್‌ಬ್ಲಾಕ್ ಪುರೋಗಾಮಿ ಪಕ್ಷ, ಆರ್-ಎಸ್. ಪಿ. ಯವರೆಲ್ಲ ಕನಿಷ್ಠ ಕಾರ್ಯಕ್ರಮದ ತಳಹದಿಯಲ್ಲಿ ಒಂದಾಗಿರುವುದರಿಂದ ಪ ಬಂಗಾಲ, ತ್ರಿಪುರಾಗಳಲ್ಲಿ ತಮ್ಮ ಸರಕಾರವನ್ನೂ, ಜನತಾ ಚಳುವಳಿಯನ್ನೂ ಮುಂದುವರಿಸಲು ಸಾಧ್ಯವಾಗಿದೆ. ಆದರೆ ಬಂಡವಳಶಾಹಿ ಪಕ್ಷಗಳು ಕನಿಷ್ಠ ಕಾರ್ಯಕ್ರಮದ ತಳಹದಿಯಲ್ಲಿ ಒಂದಾಗಲು ತಯಾರಿಲ್ಲ. ಅಷ್ಟೇ ಅಲ್ಲ ಒಬ್ಬ ಮುಖಂಡನ ಅಧಿಕಾರದ ಪ್ರಶ್ನೆ ಬಂದಾಗ ಪಾರ್ಟಿ ಮುರಿಯಲು ಕೂಡ ಹಿಂಜರಿಯುವುದಿಲ್ಲ.

ಕಾ. ನಂಬೂದಿರಿಪಾಡ್ ಹೇಳಿದಂತೆ ಕನಿಷ್ಠ ಕಾರ್ಯಕ್ರಮದ ತಳಹದಿಯಲ್ಲಿ 8 ಪಕ್ಷಗಳು ಒಟ್ಟಾಗಿ ಕೆಲಸ ಮಾಡಲು ಸಾಧ್ಯವಾಗಿದೆ. ಯಾವಾಗಲೂ ಕಮ್ಯೂನಿಸ್ಟ್ ವಿರೋಧಿಯಾಗಿಯೇ ಉಳಿದಿರುವ ನಿಜಲಿಂಗಪ್ಪನಂತವರ ಮಾರ್ಗ ದರ್ಶನದ ನೆರವು ಪಡೆಯದೆ ಜನತಾ ಪಕ್ಷದ ಅಧ್ಯಕ್ಷ ಚಂದ್ರಶೇಖರರಂಥವರು, ವಿರೋಧ ಪಕ್ಷಗಳ ಕಲ್ಕತ್ತಾ ಸಮಾವೇಶದ ಪ್ರತಿಫಲವಾಗಿ ದೇಶಾದ್ಯಂತ ಹುಟ್ಟಿ ಕೊಂಡಿರುವ ಹೊಸ ಚೈತನ್ಯದ ಅರಿವು ಮಾಡಿಕೊಂಡು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಒಕ್ಕೂಟಕ್ಕಾಗಿಯೂ, ಸಂಯುಕ್ತ ಚಳುವಳಿಗಾಗಿಯೂ ನೇತೃತ್ವ ನೀಡಲು, ಅದೇ ಶಕ್ತಿ ಇಂದಿರಾ ಕಾಂಗ್ರೆಸ್ಸಿಗೆ ಪರ್ಯಾಯ ಶಕ್ತಿಯಾಗಿ ಬೆಳೆದು ಬರುವಂತೆ ಸಹಾಯ ಮಾಡುವುದು ಅತ್ಯಗತ್ಯ.

ಜೀವದಾನ ಪಡೆದ ಅಂತುಳೆ

ಇಂದಿರಾ ಗಾಂಧಿಯ ಹೆಸರಿನಲ್ಲಿ ರೂ. 300 ಕೋಟಿ ಸಂಗ್ರಹಿಸಿ ಕೋರ್ಟಿನ ತೀರ್ಮಾನದಿಂದಾಗಿ ಇಂದಿರಾ ಗಾಂಧಿಯ ವಜ್ರಕವಚದಿಂದಲೂ ರಕ್ಷಣೆ ಪಡೆಯಲು ಶಕ್ಯವಾಗದೆ ಕೊನೆಗೆ ಮಹಾರಾಷ್ಟ್ರದ ಮುಖ್ಯಮಂತ್ರಿ ಪದಕ್ಕೆ ರಾಜೀನಾಮೆ ಕೊಟ್ಟ ಅಂತುಳೆ ಸುಪ್ರೀಂ ಕೋರ್ಟನ್ನೂ ದೇಶದ ಪರಂಪರೆಯನ್ನು ಅವಮಾನಿಸುತ್ತಿದ್ದಾರೆ. ಇದಕ್ಕೆ ಇಂದಿರಾ ಗಾಂಧಿ, ರಾಜೀವ ಗಾಂಧಿಯವರೆಲ್ಲ ರಕ್ಷಣೆ ನೀಡುತ್ತಿದ್ದಾರೆ. ಅಂತುಳೆ ರಕ್ಷಣೆಗೆ ಎ. ಕೆ. ಸೇನರಂಥ ಪ್ರಭಾವಿ ವಕೀಲರನ್ನು ನೇಮಿಸಿ ಸರಕಾರಿ ಖಜಾನೆಯಿಂದ ಹಣ ಖರ್ಚು ಮಾಡುತ್ತಿದ್ದಾರೆ ನ್ಯಾಯಾಧೀಶರ ಮೇಲೆ ಪ್ರಭಾವ ಬೀರಲೂ ಪ್ರಯತ್ನ ಮಾಡುತ್ತಿದ್ದಾರೆ.

ಇಂದಿರಾ ಕಾಂಗ್ರೆಸ್ಸು ಭ್ರಷ್ಟಾಚಾರಿಗಳ, ದರೋಡೆಖೋರರ, ಅಧಿಕಾರ ಲಾಲಸಿಗಳ ಹೊಲಸು ನಾರುವ ಕೊಂಪೆಯಾಗಿದೆ. ತನ್ನ ಅಧಿಕಾರ ತನಗೆ ಬೇಕಾದವರ ಅಧಿಕಾರ ಉಳಿಸಲು, ಅವರನ್ನು ರಕ್ಷಿಸಲು ಎಷ್ಟು ಕೀಳ್ಮಟ್ಟಕ್ಕ್ಕೆ ಹೋಗಲು, ಸಂವಿಧಾನವನ್ನೂ, ಕಾಯಿದೆ ಕಾನೂನುಗಳನ್ನು ತಿದ್ದುಪಡಿ ಮಾಡಲು ಇಂದಿರಾಗಾಂಧಿ ಸಿದ್ಧರಿದ್ದಾರೆಂಬುದನ್ನು ತುರ್ತ ಪರಿಸ್ಥಿತಿಯಲ್ಲಿ ತೋರ್ಪಡಿಸಿದರು, ಅಂತುಳೆ ಪ್ರಕರಣದಲ್ಲಿಯೂ ತೋರಿಸುತ್ತಿದ್ದಾರೆ

ಭ್ರಷ್ಟಾಚಾರ ತಡೆಹಿಡಿಯುವ ಕಾನೂನಿಗೆ ತಿದ್ದುಪಡಿಯೊಂದನ್ನು ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ಅಂತುಳೆಯವರ ಬೆಂಬಲಿಗರಾದ ಮಾಜಿ ಮುಖ್ಯ ಮಂತ್ರಿ ಭೋಸಲೆಯವರು ಮಂಡಿಸಿದಾಗ ಕೋಲಾಹಲ ಉಂಟಾಯಿತು. ಆ ರೀತಿಯ ಆದೇಶ ಇಂದಿರಾ ಗಾಂಧಿಯಿಂದ ಬಂದಿದೆಂದು ಹೇಳಿದ 6 ಗಂಟೆಯೊಳಗೆ ರಾಜೀವ ಗಾಂಧಿಯ ಮಧ್ಯ ಪ್ರವೇಶದಿಂದಾಗಿ ಅದನ್ನು ವಾಪಸು ಪಡೆಯುವ ಪ್ರಯತ್ನವೂ ನಡೆಯಿತು ಅದು ಹಿಂತೆಗೆದು ಕೊಳ್ಳಲ್ಪಟ್ಟಿತು

ಮಹಾರಾಷ್ಟ್ರದ ಮುಖ್ಯಮಂತ್ರಿ ವಸಂತದಾದಾ ಪಾಟೀಲರು ಬೋಸ್ಲೆ ಮತ್ತಿತರ ಶಾಸಕರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಬೇಕಾದೀತೆಂಬ ಎಚ್ಚರಿಕೆಯನ್ನು ನೀಡಿದ ಹಿನ್ನೆಲೆಯಲ್ಲಿ ರಾಜೀವ ಗಾಂಧಿಯ ಮಧ್ಯ ಪ್ರವೇಶದಿಂದ ಶಾಸನ ಸಭೆಯಲ್ಲಿ ಮಂಡಿಸಿದ ನಿರ್ಣಯ ವಾಪಸ್ ಪಡೆಯಲಾಯಿತು. ಭ್ರಷ್ಟಾಚಾರಕ್ಕೆ ತುತ್ತಾಗಿರುವ ಅಂತುಳೆಯವರನ್ನು ಶಿಕ್ಷೆಯಿಂದ ತಪ್ಪಿಸಲು ಸರ್ವ ವಿಧದ ಪ್ರಯತ್ನ ಮಾಡಲಾಗುವುದೆಂಬ ಆಶ್ವಾಸನೆಯನ್ನು ರಾಜೀವ ಗಾಂಧಿಯವರಿಂದ ಪಡೆದ ನಂತರವೇ ತಿದ್ದುಪಡಿ ನಿರ್ಣಯವನ್ನು ವಾಪಸ್ ಪಡೆಯ ಲಾಯಿತು.

ಆ ಆಶ್ವಾಸನೆಯಂತೆ ಹಿಂದಿನ ಕೇಂದ್ರದ ನ್ಯಾಯಾಂಗಮಂತ್ರಿ ಅಶೋಕಸೇನ್ ಅವರು, ಮಹಾರಾಷ್ಟ್ರ ಸರಕಾರದ ಪತಿಯಿಂದ ಅಂತುಳೆ ಪರವಾಗಿ ವಾದಿಸುತ್ತಾರೆ.

ಮಹಾರಾಷ್ಟ್ರ ಸರಕಾರದ ಪರವಾಗಿ ಅಶೋಕ ಸೇನ್ ಅವರನ್ನು ನೇಮಿಸಿರುವ ವಿಷಯ ಲೋಕ ಸಭೆಯಲ್ಲೂ ಪ್ರಸ್ತಾಪಕ್ಕೆ ಬಂತು. ಒಬ್ಬ ಭ್ರಷ್ಟ ಮಂತ್ರಿಯನ್ನು ರಕ್ಷಿಸಲು ಸರಕಾರದ ಹಣ ದುರುಪಯೋಗ ಮಾಡುವುದನ್ನೂ ವಿರೋಧಿಸಲಾಯಿತು.

ತನ್ನ ಲಾಭಕ್ಕಾಗಿ ಇಂದಿರಾಗಾಂಧಿ ತನ್ನ ಬೆಂಬಲಿಗರ ಕೈ ಬಿಡುವುದಿಲ್ಲೆಂಬುದಕ್ಕೆ ಅಂತುಳೆ ಪ್ರಕರಣವೇ ಸಾಕ್ಷಿ. ವಸಂತದಾದಾ ಪಾಟೀಲರ ಪ್ರಭಾವಕ್ಕೆ ದೂರಾಗಿರುವ ಭೀಮಕಾಯ ಅಂತುಳೆ. ಆದಕಾರಣ ಅಂತುಳೆಯನ್ನು ಹೇಗಾದರೂ ಬಚಾವ್ ಮಾಡಬೇಕು. ಇಲ್ಲಿ ನೀತಿ, ನಿಯಮದ ಪ್ರಶ್ನೆಯೇ ಇಲ್ಲವಲ್ಲ. ಅಂತುಳೆ ಬಂಡಾಯ ರಾಜ್ಯ ಸಭೆಯ ಚುನಾವಣೆಯ ಮೇಲೆ ಕೂಡ ಪ್ರಭಾವ ಬೀರುತ್ತಿತ್ತು ಹೋದ ಸಲ ಇದೇ ಅಂತುಳೆ ಗುಂಪು ಶರದ ಪವಾರ ಪಕ್ಷದ ಉಮೇದುವಾರನಿಗೆ ಮತ ನೀಡಿ ಜಯ ಗೊಳಿಸಿದ ಸಂಗತಿ ಮರೆಯಲಿಕ್ಕಾಗುತ್ತದೆಯೇ

ರೈತರೇ, ಇದೋ ಇಲ್ಲಿ ನೋಡಿರಿ !

ಕೇರಳದ ಕರುಣಾಕರನ್ ಸರಕಾರ ಕಳೆದ ಒಂದು ವರ್ಷದಿಂದಲೂ ಅರಬ್ಬೀ ಸಮುದ್ರದಲ್ಲಿ ಮುಳುಗೇಳುತ್ತ ಉಪ್ಪು ನೀರನ್ನು ಕುಡಿದು ಸುಸ್ತಾಗುತ್ತ ಇದೆ. ಒಂದೆರಡು ಶಾಸಕರನ್ನು ಹೊಂದಿರುವ ಪುರಾಣಿ ಪಕ್ಷಗಳೂ ಕರುಣಾಕರನ್ ಸರಕಾರದಲ್ಲಿ ಆಸ್ಥಾನ ಪೀಠದಲ್ಲಿರುವುದರಿಂದ ಪ್ರತಿ ಘಳಿಗೆಯಲ್ಲೂ ತಮ್ಮವರ ಸ್ವಂತ ಹಿತದ ಸಲುವಾಗಿ ಇಂದಿರಾರವರ ಪ್ರೀತಿಯ ಮಗನಿಗೆ ಉಪ್ಪು ನೀರು ಕುಡಿಸುತ್ತಲೇ ಇದ್ದಾರೆ. ಸಿಪಿಐ (ಎಂ) ಮತ್ತು ಅವರ ಎಡ ಪಕ್ಷಗಳ ರಂಗದ ಎದುರಾಗಿ ಇಂದಿರಾ ಗಾಂಧಿಗೆ ಕೇರಳದಲ್ಲಿ ಅಧಿಕಾರ ಉಳಿಯಲೇ ಬೇಕಾಗಿದೆ. ಆದ್ದರಿಂದ ತತ್ತ್ವವನ್ನೆಲ್ಲ ಗಾಳಿಗೆ ತೂರಿ ಗುಂಪುಗಳನ್ನೆಲ್ಲ ಒಟ್ಟಿಗೆ ಸೇರಿಸಿ ಅಧಿಕಾರದಲ್ಲುಳಿಯಲು ಸತತ ಪ್ರಯತ್ನ ನಡೆದಿದೆ.

ಕೇರಳದ ಅರಣ್ಯ ಪ್ರದೇಶದಲ್ಲಿ ಸಾವಿರಾರು ರೈತರು ವಾಸವಾಗಿದ್ದು, ಅರಣ್ಯ ರಕ್ಷಣೆಯ ಹೆಸರಿನಲ್ಲಿ ಅವರನ್ನೆಲ್ಲ ಓಡಿಸುವ ಪ್ರಯತ್ನ ನಡೆಯಿತು.

(6ನೇ ಪುಟ ನೋಡಿ)

ಅಕಾಲಿದಳದ ಪ್ರಸ್ತುತ ನಿಲುವು ಹಿಂದೂ - ಸಿಖ್ಖ್ ಐಕ್ಯತೆಗೆ ಅನುಗುಣವಾಗಿಲ್ಲ

— ಕಾ. ಸುರಜಿತ್

ಫೆಬ್ರವರಿ ತಿಂಗಳಲ್ಲಿ ಪಂಜಾಬ್ ಹರ್‍ಯಾಣಾಗಳಲ್ಲಿ ನಡೆದ ಘಟನೆಗಳು, ನಂತರದ ಬೆಳವಣಿಗೆಗಳು ಪಂಜಾಬೀ ಜನತೆಯ ಐಕ್ಯತೆಗೆ ಧಕ್ಕೆ ತರುತ್ತಿವೆ, ಪಾತ್ರವಹಿಸಿದ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಸೃಷ್ಟಿಯಾದ ಜಾತ್ಯತೀತತೆ, ದೇಶಪ್ರೇಮ ಹಾಗೂ ರಾಷ್ಟ್ರೀಯತೆ ಮೊದಲಾದ ಮೌಲ್ಯಗಳಿಗೂ ಸಂಚಕಾರ ಬರುತ್ತಿರುವ ಪ್ರಸ್ತುತ ಸನ್ನಿವೇಶದ ಹಿನ್ನೆಲೆಯಲ್ಲಿ ಸಿ.ಪಿ.ಐ.(ಎಂ)ನ ಪಾಲಿಟ್‌ಬ್ಯೂರೋ ಸದಸ್ಯ ಹಾಗೂ ಎಂ. ಪಿ. ಕಾ. ಹರಕಿಶನ್ ಸಿಂಗ್ ಸುರಜೀತ್ ಮಾರ್ಚ್ 20 ರಂದು ಶಿರೋಮಣಿ ಅಕಾಲಿದಳದ ಅಧ್ಯಕ್ಷ ಸಂತ ಹರ್‌ಚಂದ್ ಸಿಂಗ್ ಲೊಂಗೋವಾಲ್‌ರಿಗೆ ಒಂದು ಪತ್ರ ಬರೆದು ಪಂಜಾಬೀ ಜನತೆಯ ಒಗ್ಗಟ್ಟನ್ನು ಕಾಪಾಡಿ ಪಂಜಾಬಿಗಳ ಪ್ರಾಮಾಣಿಕ ಬೇಡಿಕೆಗಳನ್ನು ಸಾಧಿಸಲು ಧೀರ ನಿಲುವು ತಳೆಯಬೇಕೆಂದು ಆಗ್ರಹಪಡಿಸಿದ್ದಾರೆ.

ಪ್ರಸಕ್ತ ಮೋರ್ಚಾ ಆರಂಭಗೊಳ್ಳುವ ಮೊದಲು ಕಾ. ಸುರಜಿತ್ ಸಂತ ಲೊಂಗೋವಾಲರಿಗೆ ಒಂದು ಬಹಿರಂಗ ಪತ್ರ ಬರೆದಿದ್ದು ಮೋರ್ಚಾದ ಕೆಲವು ಬೇಡಿಕೆಗಳು ಜಾತ್ಯತೀತತೆ ಹಾಗೂ ಪ್ರಜಾಪ್ರಭುತ್ವ ವಿರೋಧಿಯಾಗಿವೆ ಎಂದು ಹೇಳಿದ್ದರು. ಆದ್ದರಿಂದಲೇ ಪ್ರಕಾಶಸಿಂಗ್ ಬಾದಲ್ ಅಕಾಲಿದಳದ ಹತ್ತು ಪ್ರಮುಖ ಬೇಡಿಕೆಗಳ ಬಗ್ಗೆ ಎಲ್ಲಾ ವಿರೋಧ ಪಕ್ಷಗಳಿಗೆ ಪತ್ರ ಬರೆದರು. ಇದರ ಆಧಾರದ ಮೇಲೇನೇ ವಿರೋಧ ಪಕ್ಷಗಳು ಅಕಾಲಿ ದಳದ ಆಂದೋಲನಕ್ಕೆ ಬೆಂಬಲ ನೀಡಿದವು. ಈ ನಡುವೆ ಸರಕಾರದ ಧೋರಣೆಯಿಂದಾಗಿ ಸಿಖ್ಖ ತೀವ್ರಗಾಮಿಗಳ ಚಟುವಟಿಕೆಗಳು ವಿಪರೀತಗೊಂಡವು. ಈ ಚಟುವಟಿಕೆಗಳನ್ನು ಸಂತ ಲೊಂಗೋವಾಲರು ಖಂಡಿಸಿದರು. ಆದರೂ ತೀವ್ರಗಾಮಿಗಳು ಸ್ವರ್ಣ ಮಂದಿರದ ಆವರಣವನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿರುವ ಸನ್ನಿವೇಶದಲ್ಲೂ ಇಷ್ಟೇ ಸಾಲುವುದಿಲ್ಲ ಎಂದು ಕಾ. ಸುರಜೀತ್ ತಮ್ಮ ಪತ್ರದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ–

"ನೀವು ಹಲವು ಬಾರಿ ಸ್ವರ್ಣ ಮಂದಿರದೊಳಗೆ ಪೋಲೀಸ್ ಪ್ರವೇಶವನ್ನು ವಿರೋಧಿಸಿದ್ದೀರಿ– ಸಿಖ್ಖ ಕೋಮಿನ ಧಾರ್ಮಿಕ ಭಾವನೆಗಳಿಗೆ ಅದರಿಂದ ಏಟು ಕೊಟ್ಟಂತಾಗುತ್ತದೆ ಎಂಬ ಕಾರಣಕ್ಕಾಗಿ. ಆದರರ್ಥ ಗುರುದ್ವಾರದ ಮೇಲ್ವಿಚಾರಣೆ ನೋಡಿಕೊಳ್ಳುವವರ ಮೇಲೆ ಏನೂ ಜವಾಬ್ದಾರಿ ಇಲ್ಲವೆಂದೇನು ? ಸ್ವರ್ಣ ಮಂದಿರದಿಂದ ತೀವ್ರಗಾಮಿಗಳು ಪತ್ರಿಕಾ ಸಮ್ಮೇಳನ ನಡೆಸುತ್ತಾರೆ. ದ್ವೇಷ ಕೆರಳಿಸಿಕೊಳ್ಳಲು, ಧಾರ್ಮಿಕ ಸ್ಥಳಗಳನ್ನು ಅಪವಿತ್ರಗೊಳಿಸಲು ಗುರುದ್ವಾರದ ವೇದಿಕೆಯ ದುರುಪಯೋಗ ನಡೆಸುತ್ತಾರೆ. ಖಲಿಸ್ತಾನದ ಸಂವಿಧಾನವನ್ನು ಜಾಹೀರುಗೊಳಿಸಿ "ಬಾವುಟ"ವನ್ನು ಹಾರಿಸುತ್ತಾರೆ ! ಇವೆಲ್ಲಾ ರಾಷ್ಟ್ರ-ವಿರೋಧಿ ಕೃತ್ಯಗಳಲ್ಲವೆ ? ಯಾವ ನೀತಿ ಮತ್ತು ವಾಧಿಕೆಯ ಆಧಾರದ ಮೇಲೆ ಈ ವಿಚ್ಛಿದ್ರಕಾರಿ ಚಟುವಟಿಕೆಗಳಿಗೆ ಅವಕಾಶ ನೀಡಲಾಗುತ್ತಿದೆ ? ಗುರುದ್ವಾರಗಳ ಪಾವಿತ್ರ್ಯತೆಯನ್ನು ಈ ಚಟುವಟಿಕೆಗಳು ಕಾಪಾಡುತ್ತವೆಯೇ ?.... ಗುರುದ್ವಾರದೊಳಗೆ ಪೋಲೀಸರ ಪ್ರವೇಶವನ್ನು ವಿರೋಧಿಸುವ ಆಡಳಿತ ಸಮಿತಿಯ ಮೇಲೂ ಒಂದು ಜವಾಬ್ದಾರಿಯಿದೆ. ಗುರುದ್ವಾರಗಳನ್ನು ಕ್ರಿಮಿನಲ್ ವ್ಯಕ್ತಿಗಳಿಗೆ ಆಶ್ರಯ ಕೊಡಲು, ಬೇರೆ ಯಾವುದೇ ಕೋಮಿನ ವಿರುದ್ಧ ದ್ವೇಷ ಹರಡಲು ಬಳಸಿಕೊಳ್ಳಲು ಅವರು ಅವಕಾಶ ನೀಡಬಾರದು."

ತೀವ್ರಗಾಮಿಗಳ ತಾಳಕ್ಕೆ ತಕ್ಕಂತೆ

ಸರಕಾರ ತೀವ್ರ ಗಾಮಿಗಳನ್ನು ಬಯಲು ಮಾಡ ಬಯಸುತ್ತಿಲ್ಲ. ಏಕೆಂದರೆ ಅಕಾಲಿದಳವನ್ನು ಇತರರಿಂದ ಪ್ರತ್ಯೇಕಗೊಳಿಸಿ ಅದನ್ನು ಏಕಾಂಗಿಯನ್ನಾಗಿಸುವುದು ಸರಕಾರದ ಬಯಕೆಯಾಗಿರಬೇಕೆಂದು ಅಭಿಪ್ರಾಯಪಡುತ್ತಾ, ಭಿಂದ್ರನ್‌ವಾಲೆಯ ಚಟುವಟಿಕೆಗಳನ್ನು ರಾಷ್ಟ್ರ ವಿರೋಧಿಯೆಂದು ಏಕೆ ಘೋಷಿಸುವುದಿಲ್ಲ ? ಆತನಿಗೆ ಸಂತನ ವೇಷ ತೊಡಲು ಏಕೆ ಅವಕಾಶ ಕೊಡಲಾಗುತ್ತಿದೆ ? ಯಾವುದೇ ಅಲ್ಪಸಂಖ್ಯಾತ ಕೋಮಿನ ವಿರುದ್ಧ ದ್ವೇಷವನ್ನು ಬೋಧಿಸುವ ಯಾವುದಾದರೂ ವಾಕ್ಯ ('ಶಾಬಾದ್')ವನ್ನು "ಗುರು ಗ್ರಂಥ ಸಾಹೀಬ್"ದಿಂದ ನೀವು ಉದ್ಧರಿಸಿ ಹೇಳಬಲ್ಲಿರಾ ?" ಎಂದು ಕಾ. ಸುರಜಿತ್ ತಮ್ಮ ಪತ್ರದಲ್ಲಿ ಪ್ರಶ್ನಿಸಿದ್ದಾರೆ.

ಫೆಬ್ರವರಿ 14-21 ರ ನಡುವೆ ಹರಿಯಾಣಾದಲ್ಲಿ ನಡೆದ ಘಟನೆಗಳ ಹಿನ್ನೆಲೆಯಲ್ಲಿ ಹಿಂದೂ-ಸಿಖ್ಖ ಐಕ್ಯತೆಯಲ್ಲಿ ನಂಬಿಕೆಯಿಟ್ಟಿರುವ ಸಂತ ಲೊಂಗೋವಾಲ್, ತಮ್ಮ ಆಂದೋಲನವನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕಿತ್ತು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಕಾಂ. ಸುರಜೀತ್, 'ಆದರೆ ನೀವು ಬೇರೆ ದಾರಿ ಆಗಿಸಿಕೊಂಡಿರಿ' ಎಂದು ಸಂತ ಲೊಂಗೋವಾಲ್‌ರಿಗೆ ತಮ್ಮ ಪತ್ರದಲ್ಲಿ ಬರೆದಿದ್ದಾರೆ ಈ ಸಂದರ್ಭದಲ್ಲಿ ಸಂವಿಧಾನದ 25 ನೇ ಕಲಮನ್ನು ಸುಡುವ ನಿರ್ಧಾರದ ಮೂಲಕ ಅಕಾಲಿದಳ ತೀವ್ರಗಾಮಿಗಳ ತಾಳಕ್ಕೆ ಕುಣಿದಂತಾಗಿದೆ ಎಂದು ಸಂತ ಲೊಂಗೋವಾಲರಿಗೆ ಸ್ಪಷ್ಟಪಡಿಸುತ್ತಾ ಈ ಹೊಸ ಬೇಡಿಕೆ ಹೇಗೆ ಅಕಾಲಿದಳದ ಪ್ರಮುಖ ಬೇಡಿಕೆಗಳಿಗೆ ಯಾವುದೇ ಬೆಂಬಲ ಗಳಿಸಿಲ್ಲ, ಬದಲಿಗೆ ಹೇಗೆ ಹಲವರ ಸಹಾನುಭೂತಿ ಕಳೆಕೊಳ್ಳಲು ಕಾರಣವಾಗಿದೆ ಎಂಬುದನ್ನು ಕಾ. ಸುರಜಿತ್ ತಮ್ಮ ಪತ್ರದಲ್ಲಿ ವಿವರಿಸಿದ್ದಾರೆ. ಸಂವಿಧಾನದ 25 ನೇ ಕಲಮು ಸಿಖ್ಖರ ಭಾವನೆಗಳಿಗೆ ಧಕ್ಕೆ ತರುವುದಿಲ್ಲವೆಂದು ಸಿಖ್ಖ ಕಾಯಿದೇ ಪಂಡಿತರುಗಳೇ ವಾದಿಸಿದ್ದಾರೆ. ಸಂವಿಧಾನ ಸಭೆಯ ಕಲಾಪಗಳನ್ನು ಪರಿಶೀಲಿಸಿದರೆ ಆಗ ಅಕಾಲಿದಳದ ಪ್ರತಿನಿಧಿಗಳು ಯಾವುದೇ ಹಂತದಲ್ಲಿ ಇದನ್ನು ವಿರೋಧಿಸಿರಲಿಲ್ಲ ಎಂಬುದು ಕಂಡು ಬರುತ್ತದೆ. 1965ರಲ್ಲಿ ಸುಪ್ರೀಂ ಕೋರ್ಟಿನ ಪಂಜಾಬ್‌ರಾವ್ ಕೇಸಿನಲ್ಲಿ ನೀಡಿದ ತೀರ್ಪು ಸಿಖ್ಖರ ಪ್ರತ್ಯೇಕ ಅಸ್ತಿತ್ವವನ್ನು ಸ್ಪಷ್ಟವಾಗಿ ಮಾನ್ಯ ಮಾಡಿದೆ. ಹೀಗಿರುವಾಗ "ಸಂವಿಧಾನದ 25 ನೇ ಕಲಮಿನ ಬಗ್ಗೆ ನಿಮ್ಮ ಪ್ರಚಾರ ಹಾಗೂ ಚಳುವಳಿ ತೀವ್ರಗಾಮಿ ಭಾವನೆಗಳಿಗೆ ನೆರವಾಗುತ್ತಿದೆಯೇ ಹೊರತು ಧಾರ್ಮಿಕ ಅಲ್ಪಸಂಖ್ಯಾತರಾದ ಸಿಖ್ಖರ ಹಕ್ಕುಗಳ ರಕ್ಷಣೆಗೂ ಇದಕ್ಕೂ ಏನು ಸಂಬಂಧವಿಲ್ಲ" ಎಂದು ಸ್ಪಷ್ಟವಾಗಿ ಕಾಂ. ಸುರಜಿತ್ ತಮ್ಮ ಪತ್ರದಲ್ಲಿ ಹೇಳಿದ್ದಾರೆ. ಆದ್ದರಿಂದ ಅಕಾಲಿದಳ ಏಪ್ರಿಲ್ 2 ರಿಂದ ಆರಂಭಿಸಬೇಕೆಂದಿದ್ದ "ಆಜಾದ್ ಪಂಥ್ ಸಪ್ತಾಹ" ಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸಿ "ನೀವು ಬಯಸುವ ಕೋಮು ಸೌಹಾರ್ದದ ಬುಡಕ್ಕೇ ಏಟು ಕೊಡುತ್ತದೆ" ಎಂದೂ ಕಾ. ಸುರಜಿತ್ ಸಂತ್ ಲೊಂಗೋವಾಲ್‌ರ ಗಮನಕ್ಕೆ ತಂದಿದ್ದಾರೆ.

ದಾರಿ ತಪ್ಪಿಸುವ ಆಟಕ್ಕೆ ಬಲಿ

ಕಾ. ಸುರಜೀತ್ ಮುಂದುವರಿಯುತ್ತಾ "ಈ ಎಲ್ಲಾ ಘೋಷಣೆಗಳು ಹಾಗೂ ತಂತ್ರಗಳಿಂದ ಅಕಾಲಿದಳ ಏನನ್ನಾದರೂ ಸಾಧಿಸಿದೆಯೆಂದು ನನಗನ್ನಿಸುವುದಿಲ್ಲ. ವಾಸ್ತವ ಸ್ಥಿತಿಯೇನೆಂದರೆ ಈ ಮೂಲಕ ಅಕಾಲಿಗಳು ವಿರೋಧ ಪಕ್ಷಗಳಿಂದ ಹಾಗೂ ಈ ದೇಶದ ಪ್ರಜಾಪ್ರಭುತ್ವವಾದೀ ಜನತೆಯಿಂದ ದೂರವಾಗುತ್ತಿದ್ದಾರೆ. ಅನಾಸಕ್ತಿ ಧೋರಣೆ ವಹಿಸಿರುವ ಪ್ರಧಾನ ಮಂತ್ರಿ ಇಂದಿರಾಗಾಂಧಿಯವರು, ಪ್ರತ್ಯೇಕತೆಯ ಘೋಷಣೆ ಹಾಕುತ್ತಿರುವ ಸಿಖ್ಖ ತೀವ್ರಗಾಮಿಗಳು ನಿಮ್ಮನ್ನು ತಪ್ಪಿತಸ್ಥರನ್ನಾಗಿಸಲು, ಎಲ್ಲಾ ಪಂಜಾಬಿಗಳನ್ನೂ ಒಂದುಗೂಡಿಸುವ ಪ್ರಮುಖ ಬೇಡಿಕೆಗಳಿಂದ ದಾರಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ. ಅವರು ತಮ್ಮ ಆಟದಲ್ಲಿ ಯಶಸ್ವಿಯಾಗುತ್ತಿರುವಂತೆ ಕಾಣುತ್ತಿದೆ" ಎಂದು ಹೇಳಿದ್ದಾರೆ. ಇತ್ತೀಚೆಗೆ 25 ನೇ ಕಲಮನ್ನು ತಿದ್ದುಪಡಿಗೊಳಿಸಲು ಕೇಂದ್ರ ಸರಕಾರದ ಒಪ್ಪಿಗೆ ಹಾಗೂ ಇದು ತಮ್ಮ ದೊಡ್ಡ ಸಾಧನೆ ಎಂದು ಹೇಳಿಕೊಂಡಿರುವ ಅಕಾಲೀದಳದ ನಾಯಕರ ಹೇಳಿಕೆಗಳು, ಕಾ. ಸುರಜಿತ್‌ರ ಈ ಮಾತುಗಳು ಎಷ್ಟು ನಿಜ ಎಂಬುದಕ್ಕೆ ಉದಾಹರಣೆಗಳು.

ಅಕಾಲಿದಳ ತನ್ನ ನ್ಯಾಯಪೂರ್ಣ ಬೇಡಿಕೆಗಳನ್ನು ಸಾಧಿಸಬೇಕಾದರೆ ಪಂಜಾಬೀ ಜನತೆಯ ಒಗ್ಗಟ್ಟು ಕಾಯ್ದುಕೊಳ್ಳಲು, ಮತ್ತು ಜತೆಗೆ ಹಿಂದೂ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡಲು ನೆರವಾಗುವಂತೆ ಅದು ಹಿಂದೂ-ಸಿಖ್ಖ ಐಕ್ಯತೆಗೆ ಅನುಗುಣವಾಗಿಲ್ಲದ ತನ್ನ ಸದ್ಯದ ನಿಲುವನ್ನು ಬದಲಿಸಿಕೊಳ್ಳಬೇಕು, ಸಿಖ್ಖ ತೀವ್ರಗಾಮಿಗಳ ರಾಷ್ಟ್ರ-ವಿರೋಧಿ ಚಟುವಟಿಕೆಗಳನ್ನು ಕಟುವಾಗಿ ಖಂಡಿಸಬೇಕು ಹಾಗೂ ಕ್ರಿಮಿನಲ್ ವ್ಯಕ್ತಿಗಳಿಗೆ ಗುರುದ್ವಾರಗಳಲ್ಲಿ ಆಶ್ರಯ ನಿರಾಕರಿಸಲಾಗುವುದೆಂದು ಘೋಷಿಸುವ ಧೀರ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ ಎಂದು ಕಾ. ಸುರಜಿತ್ ಸಂತ್ ಲೊಂಗೋವಾಲ್‌ರಿಗೆ ಈ ಪತ್ರದಲ್ಲಿ ತಿಳಿಸಿದ್ದಾರೆ.

ಡಿ. ವಿ. ಸಿಂಗ್ ಅವರಿಗೆ ಕೆಂಪು ವಂದನೆಗಳು

1945 ರಿಂದ ಹುಬ್ಬಳ್ಳಿ–ಧಾರವಾಡ, ಕಾರವಾರ, ದಾಂಡೇಲಿಗಳಲ್ಲಿ ರೈತ–ಕಾರ್ಮಿಕರಿಗಾಗಿ ಇಡೀ ಜೀವನವನ್ನೇ ಅರ್ಪಿಸಿದ ಡಿ.ವಿ. ಸಿಂಗ್ ಅವರು ಮೃತಪಟ್ಟಿದ್ದಾರೆ. ಅವರಿಗೆ ಸಿಪಿಐ (ಎಂ) ಸಂತಾಪ ವ್ಯಕ್ತ ಮಾಡುತ್ತದೆ.

ಗೋವಾದಲ್ಲಿ ಹುಟ್ಟಿದ ಸೋವಾರೆಸ್ ಅವರು ಉತ್ತರ ಹಿಂದುಸ್ಥಾನದಲ್ಲಿ ಭಗತ್‌ಸಿಂಗ್ ಅವರ ಸಂಗಾತಿಗಳ ಜೊತೆಯಲ್ಲಿದ್ದು ಹಲವಾರು ವರ್ಷ ಜೈಲುವಾಸ, ಭೂಗತ ಜೀವನ ಅನುಭವಿಸಿ ಕಮ್ಯೂನಿಸ್ಟ್ ಪಾರ್ಟಿ ಸೇರಿದರು. ಭೂಗತರಾಗಿದ್ದಾಗ ತಮ್ಮ ಹೆಸರು ಬದಲಾಯಿಸಿ ಡಿ. ವಿ. ಸಿಂಗ್ ಆದರು.

1945ರಿಂದ ಹುಬ್ಬಳ್ಳಿ-ಧಾರವಾಡ, ಕಾರವಾರ, ದಾಂಡೇಲಿಗಳಲ್ಲಿ ರೈತ-ಕಾರ್ಮಿಕರ ಮಧ್ಯೆ ಕೆಲಸ ಮಾಡಿ ಹಲವಾರು ಹೋರಾಟಗಳನ್ನು ನಡೆಸಿದರು. ದಾಂಡೇಲಿಯ ಇಂಡಿಯನ್ ಪ್ಲೈವುಡ್ ಕಾರ್ಖಾನೆ, ಇಲೆಕ್ಟ್ರೋ ಮೆಟಲರ್ಜಿಕಲ್ ಮತ್ತು ಪೇಪರ್ ಮಿಲ್ಲಿನ ಕಾರ್ಮಿಕರನ್ನು ಕೆಂಬಾವುಟದ ನೇತೃತ್ವದಲ್ಲಿ ಸಂಘಟಿಸಿದವರು ಡಿ. ವಿ. ಸಿಂಗ್. ಅನಂತರ ನಾನು ಅವರ ಜೊತೆಯಲ್ಲಿ ಸೇರಿದೆ. ಕಾ. ಸಿಂಗ್ ಅವರು 1952 ರಲ್ಲಿ ನಡೆದ ಪ್ರಥಮ ಲೋಕಸಭೆ ಚುನಾವಣೆಯಲ್ಲಿ ಕಾರವಾರದಿಂದ ಪಾರ್ಟಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು.

ಕಾರವಾರದಲ್ಲಿ ರೈತ ಮುಖಂಡರನ್ನು ಗಡೀಪಾರು ಮಾಡಿದಾಗ ರೈತ ಸಂಘಟನೆಯನ್ನು ಮುಂದುವರಿಸಿದವರು ಇವರೇ.

ಕಾರವಾರದಿಂದ ಪಾರ್ಟಿ ಹೆಸರಲ್ಲಿ ಲೋಕಸಭೆಗೆ ಪ್ರಥಮ ಬಾರಿ ಸ್ಪರ್ಧಿಸಿದ ವ್ಯಕ್ತಿ ಡಿ. ವಿ. ಸಿಂಗ್

ಕೊನೆಯವರೆಗೂ ಬ್ರಹ್ಮಚಾರಿಯಾಗಿಯೇ ಇದ್ದ ಇವರು ದಾಂಡೇಲಿಯಲ್ಲಿ ಕಟ್ಟಿಗೆ ಕೊರೆಯುವ ಕಾರ್ಖಾನೆಯ ಕಾರ್ಮಿಕನ ಮನೆಯಲ್ಲೇ ವಾಸಿಸುತ್ತಿದ್ದರು. ಶಂಕರಮ್ಮನೇ ಇವರ ಪಾಲಕರು. ಕೊನೆಯುಸಿರೆಳೆಯುವವರೆಗೂ ಶಂಕರಮ್ಮ ಇವರನ್ನು ತನ್ನ ಸ್ವಂತ ತಂದೆಯಂತೆ ನೋಡಿಕೊಂಡು ರಕ್ಷಿಸಿದರು.

ಕಾರ್ಮಿಕ ಸಂಘಟನೆಯಲ್ಲಿಯ ಏರು–ಪೇರುಗಳಿಂದಾಗಿ ಇವರು ಉಪವಾಸ ಬೀಳುವ ಪರಿಸ್ಥಿತಿ ಉಂಟಾಗುತ್ತಿದ್ದರೂ, ಪಾರ್ಟಿ, ಕಾರ್ಮಿಕ ವರ್ಗದ ಮೇಲಿನ ದೃಢ ವಿಶ್ವಾಸವನ್ನು ಅವರು ಬಿಟ್ಟಿರಲಿಲ್ಲ. ಇತ್ತೀಚಿನ ದಿವಸಗಳಲ್ಲಿ ಅವರು ಬಹಳ ಸಂಕಷ್ಟದಲ್ಲಿ ಜೀವಿಸಬೇಕಾಗಿ ಬಂದಿತ್ತು. ಪಾರ್ಟಿಗೂ ರೈತ ಕಾರ್ಮಿಕರ ಹೋರಾಟಕ್ಕೂ ಅವರ ಅಪಾರ ಸೇವೆಯನ್ನು ಸ್ಮರಿಸಲೇಬೇಕು. ಅವರ ತಂಗಿ ಹುಬ್ಬಳ್ಳಿಯಲ್ಲಿದ್ದಾರೆ. ಅವರ ಮನೆ ಇಂದಿಗೂ ಗೋವೆಯಲ್ಲಿದೆ. ಅವರಿಗೆ ನಾವು ಕೆಂಪು ವಂದನೆ ಸಲ್ಲಿಸೋಣ.

— 'ಎನ್ಕೆ'

ಎ. ಕೆ. ಜಿ. ಮತ್ತು ಎಡ ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆ

— ವಿ. ಜೆ. ಕೆ. ನಾಯರ್

ಮಾರ್ಚ್ 22 ರಂದು ಕಾ. ಎ. ಕೆ. ಗೋಪಾಲನ್‌ರವರ ಸ್ಮರಣ ದಿನಾಚರಣೆಯ ಸಂದರ್ಭದಲ್ಲಿ ಬೆಂಗಳೂರಿನಲ್ಲಿ "ಎ. ಕೆ. ಜಿ. ಸ್ಮಾರಕ ಗ್ರಂಥಾಲಯ ಮತ್ತು ಉಚಿತ ವಾಚನಾಲಯದ" ಆಶ್ರಯದಲ್ಲಿ ಏರ್ಪಡಿಸಲಾಗಿದ್ದ "ಎ. ಕೆ. ಜಿ. ಮತ್ತು ಎಡ-ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯ ಪರಿಕಲ್ಪನೆ" ಎಂಬ ವಿಷಯದ ಕುರಿತು ನಡೆದ ವಿಚಾರ ಗೋಷ್ಠಿಯಲ್ಲಿ, ಸಿಪಿಐ (ಎಂ) ರಾಜ್ಯ ಸೆಕ್ರೆಟೇರಿಯೇಟ್ ಸದಸ್ಯ ಕಾ. ವಿ. ಜೆ. ಕೆ. ನಾಯರ್ ಅವರು ಮಂಡಿಸಿದ ಲೇಖನದ ಪ್ರಥಮ ಕಂತನ್ನು ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ್ದೆವು ಎರಡನೆಯ ಹಾಗೂ ಕೊನೆಯ ಕಂತನ್ನು ಈಗ ಪ್ರಕಟಿಸುತ್ತಿದ್ದೇವೆ.

(ಕಳೆದ ಸಂಚಿಕೆಯಿಂದ)

ಎ. ಕೆ. ಜಿ. ಯವರು ಈ ಬೆಳವಣಿಗೆಯನ್ನು ವರ್ಗದೃಷ್ಟಿಯಿಂದ ವಿಶ್ಲೇಷಿಸಿದ ರೀತಿ ಇದು :

ಪಾರ್ಟಿಯನ್ನು ಒಂದು ಕಾರ್ಮಿಕರ ಪಾರ್ಟಿಯಾಗಿ ಬೆಳೆಸುವ ಜವಾಬ್ದಾರಿಯನ್ನು ಮರೆಮಾಡಲಾಯಿತು. ಹೊಸದಾಗಿ ಕಾರ್ಮಿಕ ವರ್ಗದ ಚಳುವಳಿಗೆ ಬಂದು ಸೇರುವ ಪೀಳಿಗೆಗಳಿಗೂ ಸಂಘಟನೆಗಳಿಗೂ ತಮ್ಮ ಗತಕಾಲದ ಇಷ್ಟಾನಿಷ್ಟಗಳನ್ನು ಮರೆತು ಕಾರ್ಮಿಕ ವರ್ಗದ ದೃಷ್ಟಿಕೋನದಲ್ಲಿ ನಿರಂತರವಾಗಿ ಮುಂದುವರೆಯಲು ಬೇಕಾಗುವ ತರಬೇತಿ ನೀಡಲಿಲ್ಲ. ಆಳುವ ವರ್ಗಗಳು ನಿರಂತರವಾಗಿ ನಡೆಸುವ ಸೈದ್ಧಾಂತಿಕ ದಾಳಿಗಳನ್ನು ಎದುರಿಸಿ, ವರ್ಗ ವಿರೋಧೀ ಸಿದ್ಧಾಂತಗಳಿಗೆ ಬಲಿ ಬೀಳದೆ, ಕಾರ್ಮಿಕ ವರ್ಗದ ಸಿದ್ಧಾಂತವನ್ನು ಪರಿಶುದ್ಧತೆಯಿಂದ ಕಾಪಾಡುವ ಮೂಲಕ ಕಾರ್ಮಿಕ ವರ್ಗವನ್ನೂ, ಕಾರ್ಮಿಕ ವರ್ಗದ ಅಂಗವಾಗಿದ್ದೂ ಪ್ರತ್ಯೇಕವಾಗಿ ಉಳಿದುಕೊಂಡಿರುವ ಗುಂಪುಗಳನ್ನೂ ಮುನ್ನಡೆಸಲು ಸಾಧ್ಯವಾಗಲಿಲ್ಲ. ಸಮಾಜದ ಅತ್ಯಂತ ಪುರೋಗಾಮಿ ವರ್ಗದ ಹೋರಾಟವೆಂಬ ನೆಲೆಯಲ್ಲಿ ಕಾರ್ಮಿಕರ ಹೋರಾಟವು ಶೋಷಕ ವರ್ಗದಲ್ಲಿರುವ ಪ್ರಗತಿಶೀಲರನ್ನೂ ತೀವ್ರವಾದಿಗಳನ್ನೂ ತನ್ನೆಡೆಗೆ ಆಕರ್ಷಿಸುತ್ತದೆ. ಇವರು ತಮ್ಮ ಸ್ವಂತ ವರ್ಗದ ಪರವಾಗಿರುವ ಸೈದ್ಧಾಂತಿಕ ಧೋರಣೆಯನ್ನು ಸಂಪೂರ್ಣವಾಗಿ ತ್ಯಜಿಸಿ, ಕಾರ್ಮಿಕ ವರ್ಗದೊಂದಿಗೆ ತಾತ್ತ್ವಿಕವಾಗಿಯೂ ಪ್ರಯೋಗಿಕವಾಗಿಯೂ ತಾದಾತ್ಮ್ಯ ಆರಂಭದ ಕಾಲದಲ್ಲಿ ಕಾರ್ಮಿಕೇತರ ವಿಭಾಗಗಳಿಂದ ಬೆಳೆದು ಬಂದ ತೀವ್ರವಾದಿ ಬುದ್ಧಿಜೀವಿಗಳೇ ಆಗಲೂ ಪಾರ್ಟಿಯ ಮುಂದಾಳುತ್ವದಲ್ಲಿದ್ದರು.

ಪಕ್ಷದ ಬಹುಸಂಖ್ಯಾ ನಾಯಕತ್ವದ ಸಿದ್ಧಾಂತ ಮತ್ತು ಅನುಷ್ಠಾನಗಳು ಪರಸ್ಪರ ವಿರೋಧವಾಗಿದ್ದುವು. ಎ. ಕೆ. ಜಿ. ಯವರು ಅಂತಹ ಒಂದು ಘಟನೆಯನ್ನು ಚಿತ್ರಿಸುತ್ತಾರೆ.

ವಿಜಯವಾಡದಲ್ಲಿ ಜರುಗಿದ ಪಾರ್ಟಿಯ ಆರನೇ ಅಧಿವೇಶನವು ಕಾಂಗ್ರೆಸ್-ಕಮ್ಯೂನಿಸ್ಟ್ ಐಕ್ಯರಂಗದ ಸೂಚನೆಯನ್ನು ಸ್ಪಷ್ಟವಾಗಿ ಸಂಶಯಾತೀತವಾಗಿ ತಿರಸ್ಕರಿಸಿತ್ತು. ಆದರೆ ರಾಷ್ಟ್ರೀಯ ಕೌನ್ಸಿಲಿನ ಅಧಿಕೃತ ವಿಭಾಗವು ಇದನ್ನು ಕಡೆಗಣಿಸಿ, ವಿಜಯವಾಡದಲ್ಲಿ ತಿರಸ್ಕೃತವಾದ ಧೋರಣೆಯನ್ನೇ ಪ್ರಚಾರ ಮಾಡಲು ಸಂಘಟಿತ ಪ್ರಯತ್ನ ನಡೆಸಿತು. ಕೇಂದ್ರ ಸೆಕ್ರೆಟೇರಿಯಟಿನ ಒಬ್ಬ ಸದಸ್ಯರೂ ಒಳಗೊಂಡಂತೆ ಅನೇಕ ಪ್ರಮುಖ ಸಂಗಾತಿಗಳು ವೈಯಕ್ತಿಕವಾಗಿ ಹೊರಡಿಸಿದ ಹೇಳಿಕೆಗಳಲ್ಲೂ, ಕೇಂದ್ರ ಸೆಕ್ರೆಟೇರಿಯಟ್ ಮತ್ತು ಕೇರಳರಾಜ್ಯ ಮುಂದಾಳುಗಳು ಒಟ್ಟಾಗಿ ಅನುಸರಿಸಿದ ಧೋರಣೆಗಳಲ್ಲೂ ಇವುಗಳಿಗೆ ಸಾಕಷ್ಟು ಪುರಾವೆಗಳಿವೆ. ಸದ್ಯದಲ್ಲೇ ನಡೆಯಲ್ಲಿದ್ದ ಉಪಚುನಾವಣೆಯ ಕುರಿತು 1963 ಮಾರ್ಚ್‌ನಲ್ಲಿ ಕೇಂದ್ರ ಸೆಕ್ರೆಟೇರಿಯಟ್ ಕೈಗೊಂಡ ತೀರ್ಮಾನವು ಇವುಗಳಲ್ಲೊಂದಾಗಿತ್ತು. ಬಲಪ್ರತಿಗಾಮಿ ಪಕ್ಷಗಳು ಗೆಲ್ಲುವ ಸಾಧ್ಯತೆಯಿರುವ ಚುನಾವಣಾ ಕ್ಷೇತ್ರಗಳಲ್ಲೆಲ್ಲಾ ಕಾಂಗ್ರೆಸನ್ನು ಬೆಂಬಲಿಸಬೇಕೆಂಬುದೇ ಆ ತೀರ್ಮಾನ. ಈ ಆಧಾರದಲ್ಲೇ ಕೇರಳ ರಾಜ್ಯ ಕೌನ್ಸಿಲು ಪಿ. ಎಸ್. ಪಿ. ಯ ವಿರುದ್ಧ ಕಾಂಗ್ರೆಸಿನೊಂದಿಗೆ ಚುನಾವಣಾ ಹೊಂದಾಣಿಕೆ ಮಾಡಲು ಪ್ರಯತ್ನಿಸಿದ್ದು. ಪಿ.ಎಸ್.ಪಿ. ವಿಜಯವಾಡ ಗೊತ್ತುವಳಿಯು ಪರಿಶೀಲನೆಗೆ ತೆಗೆದುಕೊಳ್ಳದ, ಬಲಪ್ರತಿಗಾಮಿ ಪಕ್ಷಗಳ ಸಾಲಿಗೆ ಸೇರದ ಪಕ್ಷವಾಗಿತ್ತು.

ಕಮ್ಯೂನಿಸ್ಟ್ ಪಕ್ಷದಲ್ಲಿನ ಬಲಗುಂಪು ಕಾಂಗ್ರೆಸ್ಸಿನ ಎಡಗುಂಪಿನೊಂದಿಗೆ ಸೇರಿ ಕಮ್ಯೂನಿಸ್ಟ್ ಪಕ್ಷದ ಎಡಗುಂಪಿನವರ ವಿರುದ್ಧ ಒಂದು ಹೋರಾಟವನ್ನೇ ಹೂಡಬೇಕೆಂಬ ರಾಜಕೀಯ ಧೋರಣೆಯನ್ನು ಸಾರುತ್ತಿದ್ದ "ಪೇಟ್ರಿಯಟ್" ಪತ್ರಿಕೆಗೆ 30,000 ರೂಗಳನ್ನು ಧಾನವಾಗಿ ಕೊಡಲಾಯಿತು. ಇದು ಮುಖ್ಯ ನಾಯಕತ್ವದ ನಿಜವಾದ ಉದ್ದೇಶವನ್ನು ಬಯಲಿಗೆಳೆಯಿತು.

"ಭಾರತದ ರಕ್ಷಣೆ" ಯ ಹೆಸರಿನಲ್ಲಿ ಕಮ್ಯೂನಿಸ್ಟ್ ಪಕ್ಷದ ಎಡ ಗುಂಪಿಗೆ ಸೇರಿದವರನ್ನು ಬೇಟೆಯಾಡಲು ಪ್ರಾರಂಭಿಸಿದರು ಸಹನೆಯ ಕೊಡ ತುಂಬಲು ಕೊನೆಯ ಹನಿ ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ರವರ ಬಂಧನ ಮತ್ತು ಅದನ್ನು ಖಂಡಿಸಲು ಕೂಡ ಪಕ್ಷದ ಮುಖ್ಯ ನಾಯಕತ್ವದ ನಿರಾಕರಣೆ

ಕಾಂ. ಎ.ಕೆ.ಜಿ. ಯವರು ಪಕ್ಷವನ್ನು ಪುನರ್ವ್ಯವಸ್ಥೆಗೊಳಿಸುವುದರಲ್ಲಿ ಮತ್ತು ಕಲ್ಕತ್ತಾದಲ್ಲಿ 1964 ರ ನವೆಂಬರ್ 7 ರಂದು "7ನೇ" ಸಮ್ಮೇಳನವನ್ನು ನಡೆಸುವುದರಲ್ಲಿ ಬಹು ಮುಖ್ಯ ಪಾತ್ರ ವಹಿಸಿದರು. ಈ ಸಮ್ಮೇಳನದಲ್ಲಿ ಸಿ.ಪಿ.ಐ (ಎಂ) ನ ಕಾರ್ಯಕ್ರಮ ಅಂಗೀಕಾರವಾಯಿತು.

1965 ರ ಕೇರಳ ಚುನಾವಣೆಗಳು

ಎ.ಕೆ.ಜಿ ಮತ್ತಿತರ ಅನೇಕ ಸಂಗಾತಿಗಳು ಇನ್ನೂ ಬಂಧನದಲ್ಲಿದ್ದಾಗಲೇ ಕೇರಳದಲ್ಲಿ ಮಧ್ಯಕಾಲೀನ ಚುನಾವಣೆಗಳು ನಡೆದುವು. "ನಾವಿನ್ನೂ ಅವರ ಬಂಧನದಲ್ಲಿರುವಾಗಲೇ ಚುನಾವಣೆ ನಡೆಸಿದರೆ ಬಿರುಗಾಳಿಯಂತೆ ಮತಗಳನ್ನು ದೋಚಬಹುದೆಂದು ಅವರು ಎಣಿಸಿದರು." ಸಿಪಿಐ(ಎಂ) ಕೂಡ ಬಹಳ ಸ್ಥಾನಗಳನ್ನು ಗೆಲ್ಲಬಹುದೆಂದು ಯೋಚಿಸಿತು. ಸಿಪಿಐ(ಎಂ) ಕಾಂಗ್ರೆಸ್ ವಿರೋಧಿ ರಂಗವನ್ನು ರೂಪಿಸಲು ಬಯಸಿತು. ಕೇವಲ ಮುಸ್ಲಿಂ ಲೀಗ್ ಮಾತ್ರ ಈ ರಂಗವನ್ನು ಸೇರಿತು. ಆರ್. ಎಸ್. ಪಿ. ಮತ್ತು ಕಾಂಗ್ರೆಸ್ ಸಿ. ಪಿ. ಐ.(ಎಂ) ಗೆ ವಿರೋಧವಾಗಿ ಸೆಣಸಿದುವು. ಚುನಾವಣಾ ಪ್ರಚಾರದ ಮುಖ್ಯ ತಿರುಳು ಮಾರ್ಕ್ಸ್‌ವಾದಿಗಳು ಚೀನಾ ಗುಪ್ತಚಾರರು ಎನ್ನುವುದು. ಆದರೆ ಮಾರ್ಕ್ಸ್‌ವಾದಿಗಳೂ ಬಂಧನದಲ್ಲಿದ್ದರೂ ಅಪೂರ್ವ ವಿಜಯವನ್ನು ಗಳಿಸಿದರು. ಆದರೆ ಕೇಂದ್ರ ಸರಕಾರ ಸಚಿವ ಸಂಪುಟವನ್ನು ರಚಿಸಲು ಬಿಡಲಿಲ್ಲ.

ಸಾಮೂಹಿಕ ಚಳುವಳಿಗಳು ಮತ್ತು ಕಾಂಗ್ರೆಸ್ ವಿರೋಧೀ ಮನೋಭಾವದಿದಾಗಿ ಹೆಚ್ಚಿನ ಕಾಂಗ್ರೆಸೇತರ ಪಕ್ಷಗಳೂ ಕಾಂಗ್ರೆಸ್ಸಿಗಿದಿರಾಗಿ ಐಕ್ಯ ಹೋರಾಟ ನಡೆಸಲು ಸಿದ್ಧವಾಗಿದ್ದವು. ಕಾಂಗ್ರೆಸನ್ನು ಸೋಲಿಸಲು ಅಗತ್ಯವಾದ ಪ್ರಜಾಸತ್ತಾತ್ಮಕ ಕಾರ್ಯಕ್ರಮವೊಂದನ್ನು ರೂಪಿಸಿ ಇತರ ಪಾರ್ಟಿಗಳೊಂದಿಗೆ ಸಂಯೋಜಿಸಿ ಐಕ್ಯರಂಗವೊಂದನ್ನು ರಚಿಸಲು ಕೇರಳದಲ್ಲಿ ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷವು ಮುತುವರ್ಜಿ ವಹಿಸಿತು. ಬಲಕಮ್ಯೂನಿಸ್ಟ್ ಪಾರ್ಟಿ. ಮುಸ್ಲಿಂ ಲೀಗ್, ಪಿ.ಎಸ್.ಪಿ., ಎಸ್. ಎಸ್. ಪಿ., ಆರ್. ಎಸ್. ಪಿ., ಕೆ. ಟಿ. ಪಿ., ಕೆ. ಎಸ್. ಪಿ. ಇವುಗಳು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯೊಂದಿಗೆ ಸೇರಿ ಐಕ್ಯರಂಗವೊಂದನ್ನು ರಚಿಸಲಾಯಿತು. ಈ ಐಕ್ಯರಂಗವು ಕನಿಷ್ಠ ಕಾರ್ಯಕ್ರಮವೊಂದನ್ನು ಅಂಗೀಕರಿಸಿತು.

1967 ರ ನಿರ್ದಿಷ್ಟ ಕಾರ್ಯಕ್ರಮ ಸ್ಪಷ್ಟವಾಗಿ ಹೆಸರಿಸದಿದ್ದರೂ ಎಡ ಮತ್ತು ಪ್ರಜಾಸತ್ತಾತ್ಮಕ ಕಾರ್ಯಕ್ರಮವಾಗಿತ್ತು.

ಮತ್ತೆ ಭೂ ಸುಧಾರಣಾ ಕಾನೂನಿಗೆ ಪ್ರತಿ ಗೇಣಿದಾರನಿಗೆ ನಾಲ್ಕು ಗುಂಟೆ ಜಮೀನನ್ನು ನೀಡಬೇಕೆಂಬ ತಿದ್ದುಪಡಿ ಬರುವ ಸಮಯಕ್ಕೆ ಸರಿಯಾಗಿ ಸಂಯುಕ್ತರಂಗವನ್ನು ಒಡೆಯಲಾಯಿತು. ಕಾಂಗ್ರೆಸ್ ಇಬ್ಭಾಗವಾಗಿದ್ದರೂ ಮತ್ತು ಇಂದಿರಾ ಗಾಂಧಿಯವರ ಘೋಷಣೆಗಳ ಹೆಸರಿನಲ್ಲಿ ಸರಕಾರವನ್ನುರುಳಿಸಿ ಅಚ್ಯುತ ಮೆನನ್‌ರವರ ಸರಕಾರ ಅಧಿಕಾರಕ್ಕೆ ಬಂತು. ನಾಲ್ಕು ಗುಂಟೆ ಜಮೀನನ್ನು ಗೇಣಿದಾರರಿಗೆ ನೀಡುವ ಬೇಡಿಕೆಯನ್ನು ಕಾರ್ಯಗತಗೊಳಿಸಲು ಎ.ಕೆ.ಜಿ. ಬಹಳವಾಗಿ ಶ್ರಮಿಸಿದ್ದರು.

ಐದು ಲಕ್ಷಕ್ಕಿಂತಲೂ ಹೆಚ್ಚು ರೈತರೂ ಕೃಷಿ ಕಾರ್ಮಿಕರೂ ಭಾಗವಹಿಸಿದ ಒಂದು ಪ್ರದರ್ಶನದ ನಂತರ ಆಲೆಪ್ಪಿಯಲ್ಲಿ ನಡೆದ ಸಮ್ಮೇಳನವೊಂದರಲ್ಲಿ ಗುಡಿಸಲು ವಾಸಿಗಳಿಗೆ ಕೊಡುವುದಾಗಿ ಘೋಷಿಸಲಾಗಿರುವ ಹತ್ತು ಸೆಂಟ್ಸ್ ಸರಕಾರೀ ಭೂಮಿಯನ್ನು ಕೂಡಲೇ ವ್ಯಾಪಕವಾಗಿ ವಶಪಡಿಸಬೇಕೆಂದು ತೀರ್ಮಾನಿಸಲಾಯಿತು. ಜನವರಿ ಒಂದರಿಂದಲೇ ಭೀಕರ ದಬ್ಬಾಳಿಕೆ ಆರಂಭವಾಯಿತು. ಗುಡಿಸಲು ವಾಸಿಗಳ ಹೋರಾಟದ ವಿರುದ್ಧ ಈ ದಬ್ಬಾಳಿಕೆಯನ್ನು ಆರಂಭಿಸಿದ್ದರು. "ಕಮ್ಯೂನಿಸ್ಟ್" ಮುಂದಾಳುತ್ವದಲ್ಲಿರುವ ಒಂದು ಸರಕಾರವು ಈ ರೀತಿ ಜನವಿರೋಧಿ ಮತ್ತು ಕಾರ್ಮಿಕ ವಿರೋಧಿ ಧೋರಣೆಗಳನ್ನು ಅಂಗೀಕರಿಸಬಹುದೆಂದು ನಂಬುವುದೇ ಕಷ್ಟವಾಗಿತ್ತು. ಗುಡಿಸಲುವಾಸಿಗಳ ಮೇಲೂ ಪೋಲೀಸರು ಭೀಕರವಾದ ದಾಳಿ ನಡೆಸಿದರು; ಗುಡಿಸಲುಗಳನ್ನು ಧ್ವಂಸ ಮಾಡಿದರು; ಮಹಿಳೆಯರ ಮೇಲೆ ಅತ್ಯಾಚಾರ ಮಾಡಿದರು; ಹೋರಾಟ ನಡೆಸಿದ್ದಕ್ಕಾಗಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರ ಮೇಲೂ ಹಿತೈಷಿಗಳ ಮೇಲೂ ವ್ಯಾಜ್ಯ ಹೂಡಿದರು. 50,000 ಕ್ಕಿಂತಲೂ ಹೆಚ್ಚು ಇಂತಹ ವ್ಯಾಜ್ಯಗಳಿದ್ದವು. ತೆಂಗಿನ ಕಾಯಿ ಕಳ್ಳತನದಿಂದ ಮೊದಲ್ಗೊಂಡು ಹಿಂಸೆಗೆ ಪ್ರೇರೇಪಣೆ ನೀಡಿದ್ದಾರೆ ಎನ್ನುವವರೆಗಿನ ಆರೋಪಗಳನ್ನು ಅವರು ಚಳುವಳಿಗಾರರ ಮೇಲೆ ಹೇರಿದರು. ಹೀಗೆ ವಿರೋಧ ಪಕ್ಷವಾದ ಮಾರ್ಕ್ಸಿಸ್ಟ್ ಪಕ್ಷವನ್ನು ಸದೆಬಡಿಯಲೂ ದೃಢನಿಶ್ಚಯ ಮಾಡಿ ಮರಿರಂಗವು ಅಧಿಕಾರದಲ್ಲಿ ಮುಂದುವರಿಯಿತು.

ಪಾಲ್ಘಾಟ್ 1971

ಹಳೆಯ ಕಾಂಗ್ರೆಸಿನ "ಪ್ರತಿಗಾಮಿಗಳ" ವಿರುದ್ಧದ ಕಹಳೆಯಾಗಿ "ಸಮಾಜವಾದ"ವನ್ನು ಉಪಯೋಗಿಸಲು ಇಂದಿರಾ ಗಾಂಧಿ ನೇತೃತ್ವದ ಆಡಳಿತ ಕಾಂಗ್ರೆಸು ತೀರ್ಮಾನಿಸಿತು. ಸಿ.ಪಿ.ಐ. ಮತ್ತು ಇತರ ಪೆಟ್ಟಿ ಬೂರ್ಶ್ವಾ ಪಾರ್ಟಿಗಳು ಇಂಡಿಕೇಟ್‌ನೊಂದಿಗೆ ಒಂದು ಕೂಟವನ್ನು ರಚಿಸಿದವು. ಬಲ ಪ್ರತಿಗಾಮಿ ಪಕ್ಷಗಳಾದ ಜನಸಂಘ ಮತ್ತು ಸ್ವತಂತ್ರ ಪಾರ್ಟಿ ಸಿಂಡಿಕೇಟ್‌ನೊಂದಿಗೆ ಸೇರಿ ಕೂಟ ಕಟ್ಟಿದವು.

ಕೇರಳದಲ್ಲಿ ಪಾರ್ಟಿಯ ಒತ್ತಾಯಕ್ಕೆ ಮಣಿದು ನಾನು ಪಾಲ್ಘಾಟಿನಿಂದ ಪಾರ್ಲಿಮೆಂಟಿಗೆ ಸ್ಪರ್ಧಿಸಿದೆ. ಅನಾರೋಗ್ಯ ಮತ್ತು ನಿತ್ರಾಣದಿಂದಾಗಿ ಚುನಾವಣೆಗೆ ನಿಲ್ಲಲು ನನಗೆ ಮನಸ್ಸಿರಲಿಲ್ಲ. ಆದರೆ ಪಾಲ್ಘಾಟಿನಿಂದ ಸ್ಪರ್ಧಿಸಿದರೆ ಹೆಚ್ಚು ಪರಿಶ್ರಮ ಅಗತ್ಯವಿರಲಾರದೆಂಬ ಭಾವನೆಯಿಂದ ನನ್ನನ್ನು ಸೋಲಿಸಲು ಎಲ್ಲರೂ ಒಟ್ಟಾಗಿ ಪ್ರಯತ್ನಿಸಿದರು. ಮರಿರಂಗ, ಆಡಳಿತ ಕಾಂಗ್ರೆಸ್, ಜನಸಂಘ, ಸಂಸ್ಥಾ ಕಾಂಗ್ರೆಸ್ ಇವರೆಲ್ಲರೂ ಒಟ್ಟಾದರು. ಇವರೆಲ್ಲರ ಪರವಾಗಿ ಸ್ವತಂತ್ರ ಅಭ್ಯರ್ಥಿ ಎಂಬ ಹೆಸರಿನಲ್ಲಿ ಜನಸಂಘದ ಸಿ. ಗೋವಿಂದನ್ ನನ್ನ ವಿರುದ್ಧ ಸ್ಪರ್ಧಿಸಿದರು. ಇಷ್ಟು ಪ್ರಸಿದ್ಧನಾದ ಜನಸಂಘಿಯನ್ನು ಮುಸ್ಲಿಂ ಲೀಗ್ ಮತ್ತು ಸಿ.ಪಿ.ಐ ಬೆಂಬಲಿಸಿದ್ದು ಬಹಳ ಸೋಜಿಗದ ಸಂಗತಿಯಾಗಿತ್ತು.

ಕಾಂಗ್ರೆಸ್ಸಿನ ಕೆಲವರಿಗಾದರೂ ಇದು ನುಂಗಲಾರದ ತುತ್ತಾಗಿತ್ತು. ಪಾಲ್ಘಾಟಿನಿಂದ ಅಭ್ಯರ್ಥಿಯಾಗಬಯಸಿದ್ದ ಎಂ. ರಾಜಗೋಪಾಲನ್ ಎಂಬುವರು ಜನಸಂಘವೇ ಮೊದಲಾದ ಪ್ರತಿಗಾಮಿ ಪಕ್ಷಗಳೊಂದಿಗೆ ಆಡಳಿತ ಕಾಂಗ್ರೆಸ್ ಮಾಡಿಕೊಂಡಿದ್ದ ಮೈತ್ರಿಯನ್ನು ಬಹಿರಂಗವಾಗಿ ಟೀಕಿಸಿ, ಈ ಅಪವಿತ್ರ ಮೈತ್ರಿಯನ್ನು ಖಂಡಿಸುವ ಪತ್ರಿಕಾ ಹೇಳಿಕೆಯನ್ನೂ ಹೊರಡಿಸಿದರು. ಅತಿಪ್ರಬಲ ಶಕ್ತಿಗಳು 'ನನ್ನ ಪ್ರತಿಸ್ಪರ್ಧಿಯ ಬೆಂಬಲಕ್ಕೆ ಇದ್ದುದರಿಂದ ನಾನು ಚುನಾವಣಾ ಕ್ಷೇತ್ರದ ಮೂಲೆ ಮೂಲೆಗಳಿಗೂ ಹೋಗಿ ತೀವ್ರ ಪ್ರಚಾರ ಮಾಡುವುದು ಅಗತ್ಯವಾಯಿತು. ಪಾಲ್ಘಾಟಿಗೆ ರೈತ ಚಳುವಳಿಯ ಭವ್ಯ ಇತಿಹಾಸವಿದೆ. ರೈತರ ಮಧ್ಯೆ ನಾನು ಮಾಡಿದ್ದ ಕೆಲಸಗಳಿಂದಾಗಿ ಎದುರಾಳಿಯ ಸಂಘಟಿತ ಆಕ್ರಮಣವನ್ನು ಎದುರಿಸಲು ನಾನು ಶಕ್ತನಾದೆ, ಎಲ್ಲಾ ಕೊನೆಗೊಂಡಾಗ ಒಂದು ಡಜನ್ ಪಾರ್ಟಿಗಳ ಬೆಂಬಲ ಹೊಂದಿದ್ದ ನನ್ನ ಎದುರಾಳಿಗಿಂತ 52 ಸಾವಿರ ಓಟುಗಳ ಬಹುಮತದೊಂದಿಗೆ ಗೆಲ್ಲಲು ನನಗೆ ಸಾಧ್ಯವಾಯಿತು. ಎ.ಕೆ.ಜಿ ಯವರು ತಮ್ಮ

(7ನೇ ಪುಟ ನೋಡಿ)

ಆರ್ಥಿಕ ಸಮೀಕ್ಷೆ

ಕೇಂದ್ರ ಮುಂಗಡ ಪತ್ರ - ಕಣ್ಣೊರೆಸುವ ಕಸರತ್ತು

— ಆರ್. ಚಂದ್ರ

ಈ ವರ್ಷದ ಮುಂಗಡಪತ್ರ ಮುಂಬರುವ ಲೋಕಸಭಾ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಜನರ ಕಣ್ಣೊರೆಸುವ ಕಸರತ್ತಾಗಿದೆ. 1984-85ರ ಕೇಂದ್ರ ಮುಂಗಡ ಪತ್ರದಲ್ಲಿ ಕೆಲವು ಗ್ರಾಹಕ ವಸ್ತುಗಳ ಮೇಲಣ ತೆರಿಗೆ ರಿಯಾಯಿತಿಗಳು, ವೈಯಕ್ತಿಕ ಆದಾಯ ತೆರಿಗೆದಾರರಿಗೆ ಪರಿಹಾರ ಮತ್ತು ಕನಿಷ್ಠ ಪ್ರಮಾಣದ ಹೊಸ ತೆರಿಗೆ ಹಾಗೂ ಕೊರತೆ (deficit) ಇರುವುದರಿಂದ ಇದನ್ನು ಇಂದಿರಾ ಕಾಂಗ್ರೆಸ್ ಪಕ್ಷದವರೂ ಬಂಡವಾಳಶಾಹಿ ಬಾಲಬಡುಕರೂ ಬಹಳವಾಗಿ ಹೊಗಳುತ್ತಿದ್ದಾರೆ. ದೇಶದ ಆರ್ಥಿಕ ವ್ಯವಸ್ಥೆಯು ದುಃಸ್ಥಿತಿಯ ಅಪಾಯದಿಂದ ಪಾರಾಗಿದೆ. ಕೆಲವು ತಿಂಗಳುಗಳಿಂದ ಬೆಲೆ ಏರಿಕೆ ನಿಯಂತ್ರಣದಲ್ಲಿದೆ. ವಿದೇಶಿವಿನಿಮಯ ಪರಿಸ್ಥಿತಿ ಸುಧಾರಿಸಿರುವುದರಿಂದ ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ (ಐ.ಎಂ.ಎಫ್) ಪಡೆಯಬೇಕಾಗಿದ್ದ ರೂ. 1000 ಕೋಟಿ ಸಾಲವನ್ನು ಕೈಬಿಡಲಾಗಿದೆ ಎಂದೆಲ್ಲಾ ಹೇಗಳಿಕೊಳ್ಳಲಾಗುತ್ತಿದೆ. ಇವೆಲ್ಲಾ ಚುನಾವಣಾ ಪೂರ್ವದ ಪ್ರಚಾರ ಪ್ರಕ್ಷೋಭೆಗಳ ಅರ್ಧಸತ್ಯಗಳೆಂದು ತಿಳಿಯಲು ಕಷ್ಟವಿಲ್ಲ.

ಯಾವುದೇ ಒಂದು ವರ್ಷದ ಮುಂಗಡ ಪತ್ರವನ್ನು ಸ್ವತಂತ್ರವಾಗಿ ಪರಿಶೀಲಿಸುವುದು ಸರಿಯಾಗಲಾರದು. ಅದನ್ನು ಹಿಂದಿನ ವರ್ಷಗಳ ಮುಂಗಡ ಪತ್ರಗಳಿಗೆ ಹೋಲಿಸಿಕೊಂಡು ಪರಿಶೀಲಿಸಬೇಕು. ಕಾರಣ, ಹಿಂದಿನ ಮುಂಗಡ ಪತ್ರಗಳಲ್ಲಿ ನಮೂದಿಸಿದ ಕರಭಾರ, ದೇಶ ವಿದೇಶಿ ಸಾಲ, ಕೊರತೆ ಹಣಸೃಷ್ಟಿ, ಆಡಳಿತ-ಅಭಿವೃದ್ಧಿಗಳಿಗಾಗಿ ನಡೆಸಿದ ಖರ್ಚುಗಳು, ಮುಂಗಡ ಪತ್ರಗಳ ಹೊರತಾಗಿ ಆಡಳಿತ ನಿರ್ದೇಶನಗಳ ಮೂಲಕ ಅವಶ್ಯಕ ವಸ್ತುಗಳ ಬೆಲೆ ಏರಿಕೆ, ಇತ್ಯಾದಿಗಳು ಪ್ರತಿವರ್ಷವೂ ವರ್ಷಕ್ಕೆ ತಮ್ಮ ಒಟ್ಟು ದುಷ್ಪರಿಣಾಮಗಳನ್ನು ಹೆಚ್ಚು ಮಾಡುವುವು. ಒಮ್ಮೆ ವಿಧಿಸಿದ ಕರಭಾರ, ಸಾಲದ ಹೊರೆ, ಕೃತಕ ಹಣಸೃಷ್ಟಿ, ಬೆಲೆ ಏರಿಕೆ, ಮುಂದಿನ ವರ್ಷಗಳಲ್ಲಿಯೂ ಮುಂದುವರಿಯುತ್ತಲೇ ಇರುವುವು. ಆದುದರಿಂದ ಮುಂಗಡ ಪತ್ರದ ನಿಜವಾದ ಪರೀಕ್ಷೆ ಅದು ದೇಶದ ಜನರ ಬಡತನ, ಬೆಲೆ ಏರಿಕೆ, ನಿರುದ್ಯೋಗ ಮೊದಲಾದ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲು ಎಷ್ಟು ಸಫಲವಾಗಿದೆ ಎಂದು ಪರಿಶೀಲಿಸುವುದರಲ್ಲಿದೆ. ಬಡತನ, ಬೆಲೆ ಏರಿಕೆ, ನಿರುದ್ಯೋಗಗಳನ್ನು ಸೇರಿಸುವ ಸೂಚಿಗಳೆಂದು (index of Suffering) ಪ್ರಸಿದ್ಧ ಅರ್ಥ ಶಾಸ್ತ್ರಜ್ಞರು ಪರಿಗಣಿಸಿದ್ದಾರೆ. ಈ ಸಮಸ್ಯೆಗಳನ್ನು ಬಗೆಹರಿಸಲು ಹಿಂದಿನ ಮುಂಗಡ ಪತ್ರಗಳಂತೆಯೇ! ಈ ವರ್ಷದ ಮುಂಗಡ ಪತ್ರವೂ ಸೋತಿವೆ. ಅಲ್ಪಸ್ವಲ್ಪ ಪರಿಹಾರಗಳು ಜನರನ್ನು ಮಾತಗಟ್ಟಿಗಳಿಗೊಯ್ಯಬಹುದೇ ಹೊರತು ಅವರನ್ನು ಆರ್ಥಿಕದುಃಸ್ಥಿತಿಯಿಂದ ಮುಕ್ತಗೊಳಿಸಲಾರವು.

ನಿರಂತರ ಬೆಲೆ ಏರಿಕೆ

ಪ್ರತಿ ಒಂದು ಮುಂಗಡ ಪತ್ರದಲ್ಲಿಯೂ ಅದರಿಂದ ಬೆಲೆ ಏರಿಕೆ ಆಗಲಾರದೆಂದು ಆಶ್ವಾಸನೆ ಕೊಡಲಾಗುತ್ತಿದ್ದರೂ ಜನರ ಜೀವನಾವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿವೆ. ವರ್ಷದಲ್ಲಿ ಯಾವಾಗಲಾದರೂ ಬೆಲೆಗಳು ಸ್ವಲ್ಪ ಇಳಿ ಮುಖವಾದೊಡನೆ, ಇಂದಿರಾ ಸರಕಾರ ಕಾಕತಾಳೀಯ ನ್ಯಾಯದಂತೆ ಬೆಲೆ ನಿಯಂತ್ರಿಸುವುದರಲ್ಲಿ ತಾನು ಯಶಸ್ವಿಯಾಗಿದೆ ಎಂದು ಘೋಷಿಸಿಕೊಳ್ಳುತ್ತಿದೆ. ಆದರೆ ನಿಜಾಂಶವೇನು?

ಡಿಸೆಂಬರ್, 1979 ರಲ್ಲಿ, ಇಂದಿರಾ ಗಾಂಧಿ ಸರಕಾರ ಪುನಃ ಅಧಿಕಾರಕ್ಕೆ ಬರುವ ಹಿಂದಿನ ತಿಂಗಳಲ್ಲಿ, ಕೈಗಾರಿಕಾ ಕಾರ್ಮಿಕ ಗ್ರಾಹಕರ ಬೆಲೆ ಸೂಚಿಯು (1960= 100) 364 ಆಗಿತ್ತು. ಮುಂದೆ, ನವಂಬರ್, 933 ರಲ್ಲಿ ನಾಲ್ಕು ವರ್ಷಗಳ ಇಂದಿರಾ ಆಳ್ವಿಕೆಯ ನಂತರ ಈ ಗ್ರಾಹಕರ ಬೆಲೆಸೂಚಿಯು 548 ಕ್ಕೆ ನೆಗೆಯಿತು; ಅಂದರೆ, ನಾಲ್ಕು ವರ್ಷದ ಅವಧಿಯಲ್ಲಿ ಬೆಲೆಸೂಚಿಯು ವರ್ಷಕ್ಕೆ ಸರಾಸರಿ 46 ಅಂಶಗಳಂತೆ ಒಟ್ಟು 184 ಅಂಶಗಳಷ್ಟು ಹೆಚ್ಚಾಯಿತು. ಅರ್ಥಾತ್ ಶೇ 150 ರಷ್ಟು ಬೆಲೆ ಏರಿಕೆ ಹೆಚ್ಚಾಯಿತು. ಅದೇ ಅವಧಿಯಲ್ಲಿ ಸಗಟು ವ್ಯಾಪಾರದ ಬೆಲೆ ಸೂಚಿ (1970-71= 100) ಡಿಸೆಂಬರ್ 1979 ರಲ್ಲಿ 224 ಇದ್ದುದು, ಡಿಸೆಂಬರ್, 1983 ರಲ್ಲಿ 320 ಕ್ಕೇರಿ, ಈ ವರ್ಷ ಫೆಬ್ರವರಿಯಲ್ಲಿ 323 ಕ್ಕೆ ನೆಗೆಯಿತು ! ಸಗಟು ಬೆಲೆ ಸೂಚಿಯು ಗ್ರಾಹಕರ ಬೆಲೆ ಸೂಚಿಗಿಂತ ನಿಧಾನವಾಗಿ ಏರುತ್ತಿದ್ದರೂ ಇಂದಿರಾ ಸರಕಾರದ ಹೊಸ ಆಳ್ವಿಕೆಯ ಅವಧಿಯಲ್ಲಿ 100 ಅಂಶಗಳಷ್ಟು ಏರಿತು. ಅಂದರೆ, ವರ್ಷಕ್ಕೆ ಸರಾಸರಿ 24 ಅಂಶಗಳಷ್ಟು ಸಗಟು ವ್ಯಾಪಾರದ ಬೆಲೆ ಸೂಚಿಯಲ್ಲಿ ಏರಿಕೆಯಾಯಿತು. ಜನತಾ ಸರಕಾರದ ಆಳ್ವಿಕೆಯ ಅವಧಿಯಲ್ಲಿ ಸಗಟು ವ್ಯಾಪಾರದ ಬೆಲೆ ಸೂಚಿ ಮಾರ್ಚ್ 1977 ರಲ್ಲಿ 182 ಇದ್ದುದು ಡಿಸೆಂಬರ್ 1979 ರಲ್ಲಿ 224 ಕ್ಕೆ ಏರಿತ್ತು; ವರ್ಷಕ್ಕೆ ಸರಾಸರಿ 15 ಅಂಶಗಳಂತೆ ಒಟ್ಟು 42 ಅಂಶಗಳಷ್ಟು ಹೆಚ್ಚಾಗಿತ್ತು. ಇದೇ ಅವಧಿಯಲ್ಲಿ ಗ್ರಾಹಕರ ಬೆಲೆ ಸೂಚಿಯು 301 ರಿಂದ 364 ಕ್ಕೆ ಏರಿತ್ತು. ಜನತಾ ಸರಕಾರದ ಬೆಲೆ ನಿಯಂತ್ರಣದ ವೈಫಲ್ಯದ ಫಲವಾಗಿ ಮರಳಿ ಅಧಿಕಾರಕ್ಕೆ ಬಂದ ಇಂದಿರಾ ಸರಕಾರದ ಅವಧಿಯಲ್ಲಿ ಬೆಲೆಗಳು ಇನ್ನಷ್ಟೂ ಹೆಚ್ಚು ವೇಗದಲ್ಲಿ ಹೆಚ್ಚುತ್ತಿದ್ದು ರೂಪಾಯಿಯ ಬೆಲೆ 18 ಪೈಸೆಗಿಂತಲೂ ಕಡಿಮೆ ಆಯಿತು. ಜೀವನಾವಶ್ಯಕ ವಸ್ತುಗಳಾದ ಆಹಾರ ಧಾನ್ಯಗಳು, ಬಟ್ಟೆ, ಚಾ-ಕಾಫಿ, ಉರುವಲು, ಹಾಗೂ ಸಾರಿಗೆ, ಸಂಪರ್ಕ, ವಸತಿ ಸೌಕರ್ಯಗಳ ಬೆಲೆಗಳು ವಿಪರೀತವಾಗಿ ಏರಿರುವುದರಿಂದ ಜನರ ಗ್ರಾಹಕ ಶಕ್ತಿ ಬಹಳಷ್ಟು ಕ್ಷಯಿಸಿ ಅವರ ಜೀವನ ಮಟ್ಟ ಇನ್ನಷ್ಟೂ ಕುಸಿಯಿತು.

ಸಾಂಕೇತಿಕ ರಿಯಾಯತಿಗಳು

ಈ ಹಿನ್ನೆಲೆಯಲ್ಲಿ ಈ ವರ್ಷದ ಮುಂಗಡ ಪತ್ರದಲ್ಲಿ ಕೆಲವು ವಸ್ತುಗಳ ಮೇಲೆ ಅಲ್ಪಸ್ವಲ್ಪ ತೆರಿಗೆ ರಿಯಾಯತಿ ನೀಡಿರುವುದರಿಂದಾಗಲಿ, ವೈಯಕ್ತಿಕ ಆದಾಯ ತೆರಿಗೆಯ ದರ ಸ್ವಲ್ಪ ಇಳಿಸುವುದರಿಂದಾಗಲೀ ಬೆಲೆ ಏರಿಕೆ-ಹಣದುಬ್ಬರಕ್ಕೆ ಪರಿಹಾರ ನೀಡಿದಂತಾಗುವುದಿಲ್ಲ. ಬದಲು, ಇದರಿಂದ ರಾಜ್ಯ ಸರ್ಕಾರಗಳಿಗೆ ಸಲ್ಲಬೇಕಾದ ತೆರಿಗೆಯ ಆದಾಯ ಕಡಿಮೆಯಾಗುತ್ತದೆ. ಸುಂಕದ ತೆರಿಗೆ ಹೆಚ್ಚಳದ (ಕಸ್ಟಮ್ಸ್ ಡ್ಯೂಟಿ-ಆಮದು ರಫ್ತುಗಳ ಮೇಲೆ) ಮೂಲಕ ಕೇಂದ್ರಸರ್ಕಾರ ತನ್ನ ತೆರಿಗೆಯ ಆದಾಯ ರಕ್ಷಿಸಿಕೊಂಡಿದೆ. ಚುನಾವಣಾ ಪೂರ್ವದಲ್ಲಿ ರಾಜ್ಯ ಸರ್ಕಾರಗಳನ್ನು, ಮುಖ್ಯವಾಗಿ ವಿರೋಧ ಪಕ್ಷಗಳ ಆಳ್ವಿಕೆಯಲ್ಲಿರುವವುಗಳನ್ನು ಇಕ್ಕಟ್ಟಿನಲ್ಲಿ ಸಿಲುಕಿಸುವ ಕುತಂತ್ರವೂ ಇದಾಗಿದೆ.

ಕೆಲವು ವಸ್ತುಗಳ ಮೇಲಿನ ತೆರಿಗೆ ರಿಯಾಯತಿಗಳು ಗ್ರಾಹಕರಿಗೆ ಸೇರದೆ ಮಧ್ಯವರ್ತಿಗಳಾದ ಕೈಗಾರಿಕೋದ್ಯಮಿಗಳಿಗೆ ಮತ್ತು ವ್ಯಾಪಾರಸ್ಥರಿಗೆ ಅಪಾರ ಲಾಭದ ರೂಪದಲ್ಲಿ ಸೇರುವ ಸಂಭವವೇ ಹೆಚ್ಚು. ಬೆಲೆ ಇಳಿತ ಸಗಟು ವ್ಯಾಪಾರದ ಬೆಲೆ ಸೂಚಿಯಲ್ಲಿ ಅಲ್ಪಸ್ವಲ್ಪ ಕೆಲವು ವಾರಗಳ ಅವಧಿಯಲ್ಲಿ ಕಂಡು ಬಂದರೂ ಗ್ರಾಹಕರ ಬೆಲೆ ಸೂಚಿಯಲ್ಲಿ ಏನೂ ಬದಲಾವಣೆಯಾಗಲಾರದು. ಹಣದುಬ್ಬರ ವರ್ಷಕ್ಕೆ ಶೇ 12-13ರ ದರದಲ್ಲಿ ಏರುತ್ತಿರುವಾಗ ವೈಯಕ್ತಿಕ ತೆರಿಗೆಯದರದಲ್ಲಿ ಶೇ 5ರಷ್ಟು ಕಡಿಮೆ ಮಾಡಿರುವುದರಿಂದ ಹೆಚ್ಚಿನ ಪ್ರಯೋಜನವಾಗಲಾರದು. ಕಡ್ಡಾಯ ಠೇವಣಿಯ ಭಾರ ಆದಾಯ ತೆರಿಗೆ ತೆರುವವರ ಮೇಲೆ ಕಳೆದ ಹತ್ತು ವರ್ಷಗಳಿಂದಲೂ ಮುಂದುವರಿಯುತ್ತಿದೆ. ಆದಾಯ ತೆರಿಗೆ ದರ ಇಳುವರಿಯಿಂದ ರೂ. 16000 ವಾರ್ಷಿಕ ವರಮಾನ ಇರುವವರಿಗೆ ಕೇವಲ ರೂ 53 ಆದಾಯ ತೆರಿಗೆಯಲ್ಲಿ ಉಳಿತಾಯವಾಗುವುದು. 1 ಲಕ್ಷ ವರಮಾನ ಇರುವವರಿಗೆ ರೂ. 4922 ಮತ್ತು ರೂ. 5ಲಕ್ಷ ವರಮಾನ ಇರುವವರಿಗೆ ರೂ 27,422 ರಷ್ಟು ಆದಾಯತೆರಿಗೆಯಲ್ಲಿ ಉಳಿತಾಯವಾಗಲಿದೆ. ಅಂದರೆ, ಇದರಿಂದಲೂ ಮಧ್ಯಮ ವರ್ಗದವರಿಗೆ ಹೆಚ್ಚಿನ ಪ್ರಯೋಜನವಾಗದೆ, ಶ್ರೀಮಂತ ವರ್ಗಕ್ಕೇ ಹೆಚ್ಚು ಲಾಭವಾಗಲಿದೆ.

ಈ ವರ್ಷದ ತೆರಿಗೆ ರಿಯಾಯತಿಗಳಿಂದ ಇಂದಿರಾ ಸರ್ಕಾರದ ಆರ್ಥಿಕ ರೀತಿಯಲ್ಲಿ ಗಣನೀಯವಾದ ಬದಲಾವಣೆಯಾಗಿದೆ ಎಂದು ಭಾವಿಸಬಾರದು. ಮುಂದೆ ಚುನಾವಣೆಯಲ್ಲಿ ಗೆದ್ದು ಪುನಃ ಅಧಿಕಾರಕ್ಕೆ ಬಂದರೆ ಇನ್ನಷ್ಟು ಹೆಚ್ಚು ಕರಭಾರ, ಸಾಲದ ಹೊರೆ, ಬೆಲೆ ಏರಿಕೆ ಜನರ ಮೇಲೆ ಹೇರದಿರದು.

ಕಳೆದ ನಾಲ್ಕು ವರ್ಷಗಳ ಅನುಭವದಿಂದ ಇದು ಸ್ಪಷ್ಟವಾಗುವುದು. ಮೇಲಾಗಿ, ಕಾರ್ಮಿಕರಿಗೆ ಹಾಗೂ ನೌಕರರಿಗೆ ನ್ಯಾಯೋಚಿತವಾಗಿ ಸಿಗಬೇಕಾದ ಬೋನಸ್, ತುಟ್ಟಿಭತ್ಯ ಮತ್ತು ವೇತನ ಹೆಚ್ಚಳ, ಇತರ ಸೌಕರ್ಯಗಳನ್ನು ಮೊಟಕುಗೊಳಿಸುತ್ತಿರುವುದು ಮತ್ತು ತಡೆಹಿಡಿಯುತ್ತಿರುವುದೂ ಹೊಸದಾಗಿ ನಿರುದ್ಯೋಗಕ್ಕೆ ನೇಮಕಾತಿ ಮಾಡಿಕೊಳ್ಳದಿರುವುದೂ ಶ್ರಮಿಕ ವರ್ಗದ ವಿರುದ್ಧ ಸರಕಾರದ ಬಿಗು ನೀತಿಗೆ ಸ್ಪಷ್ಟ ಸಾಕ್ಷಿ.

ಹೆಚ್ಚುತ್ತಿರುವ ನಿರುದ್ಯೋಗ

ದೇಶಾದ್ಯಂತ ಉದ್ಯೋಗ ವಿನಿಮಯಗಳಲ್ಲಿ ಕೆಲಸಕ್ಕಾಗಿ ಕಾಯುತ್ತಿರುವವರ ಸಂಖ್ಯೆ 1979ರಲ್ಲಿ 1.39 ಕೋಟಿಯಾಗಿತ್ತು. 1983ರ ಮಧ್ಯ ಅವಧಿಯಲ್ಲಿ ಈ ಸಂಖ್ಯೆ 2.11 ಕೋಟಿಗೆ ಏರಿದೆ. ಅಲ್ಲಿಂದ ಪ್ರತಿ ತಿಂಗಳಿಗೆ 1 6 ಲಕ್ಷದಷ್ಟು ಉದ್ಯೋಗಾಂಕ್ಷಿಗಳು ತಮ್ಮ ಹೆಸರುಗಳನ್ನು ದಾಖಲೆ ಮಾಡಿಸುತ್ತಿದ್ದಾರೆ. ಖಾಸಗಿ ಹಾಗೂ ಸಾರ್ವಜನಿಕ ಸಂಘಟಿತ ಕ್ಷೇತ್ರದಲ್ಲಿ ತಿಂಗಳಿಗೆ 50 ಸಾವಿರಕ್ಕಿಂತ ಹೆಚ್ಚು ಹೊಸ ಉದ್ಯೋಗಾವಕಾಶ ಕೊಡಲು ಅಸಾಧ್ಯವಾಗುತ್ತಿದೆ. ಪರಿಣಾಮವಾಗಿ, 2.11 ಕೋಟಿ ನಿರುದ್ಯೋಗಸ್ಥರ ಸಾಲಿಗೆ ಪ್ರತಿ ತಿಂಗಳೂ 1 ಲಕ್ಷಕ್ಕಿಂತಲೂ ಹೆಚ್ಚು ನಿರುದ್ಯೋಗಸ್ಥರು ಸೇರಿಕೊಳ್ಳುತ್ತಿದ್ದಾರೆ. ಉದ್ಯೋಗ ವಿನಿಮಯಗಳಲ್ಲಿ ದಾಖಲೆ ಮಾಡದಿರುವ ನಿರುದ್ಯೋಗಿಗಳನ್ನೂ ಗಣನೆಗೆ ತೆಗೆದುಕೊಂಡರೆ ಇಂದು ಒಟ್ಟು 4.22 ಕೋಟಿ ನಿರುದ್ಯೋಗಸ್ಥರಿರಬಹುದು. ಇವರಿಗೆ ಉದ್ಯೋಗವೂ ಇಲ್ಲ, ನಿರುದ್ಯೋಗ ಭತ್ಯೆಯೂ ಇಲ್ಲ. ಅಲ್ಪ ಆದಾಯದ ಉದ್ಯೋಗಸ್ತರೂ ಅರೆ ಉದ್ಯೋಗಸ್ತರೂ ಇವರಿಗೆ ಆಶ್ರಯದಾತರು.

ಆರ್ಥಿಕ ಹಿಂಜರಿತದ ಕಾರಣ ಸಣ್ಣ ಉದ್ಯಮ ಮಟ್ಟದ ಉದ್ದಿಮೆಗಳು ದಿವಾಳಿಯಾಗುತ್ತಿವೆ. ಗುತ್ತೇದಾರಿ ಕೈಗಾರಿಕೋದ್ದಿಮೆಗಳು ಮಾತ್ರ ಬೆಳೆದು ಪ್ರಬಲವಾಗುತ್ತಿವೆ. ಸದ್ಯ ಇಂತಹ 28,360 ರೋಗಗ್ರಸ್ತ ಕೈಗಾರಿಕಾ ಸಂಸ್ಥೆಗಳಿವೆ ಎಂದು ತಿಳಿದು ಬಂದಿದೆ. ಅಲ್ಲಿನ ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ದೊಡ್ಡ ಕೈಗಾರಿಕಾ ಸಂಸ್ಥೆಗಳಲ್ಲಿ ಯಾಂತ್ರೀಕರಣ, ಆಧುನೀಕರಣ, ಗಣಕೀಕರಣಗಳಿಂದಾಗಿ ಬಹುಸಂಖ್ಯೆಯಲ್ಲಿ ಕಾರ್ಮಿಕರು ಕೆಲಸ ಕಳೆದು ಕೊಳ್ಳುತ್ತಿದ್ದಾರೆ. ವಿಪರೀತ ಬೆಲೆ ಏರಿಕೆ ಹಣದುಬ್ಬರ ಸಮಸ್ಯೆಯಿಂದ ಜನರ ಗ್ರಾಹಕ ಶಕ್ತಿಯು ಕ್ಷಯಿಸುತ್ತಿದ್ದು ಆಂತರಿಕ ಮಾರುಕಟ್ಟೆಯು ಬರಿದಾಗುತ್ತಿದೆ. ಮುಂಗಡ ಪತ್ರದಲ್ಲಿ ಇವಾವ ಸಮಸ್ಯೆಯನ್ನು ಬಗೆ ಹರಿಸಲು ಸೂಚನೆಗಳಿಲ್ಲ !

ಬಗೆ ಹರಿಯದ ಬಡತನ

ಆರನೇ ಯೋಜನೆಯ ಕರಡು ಪ್ರತಿಯಲ್ಲಿ 1977-78 ರಲ್ಲಿ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ. 46ರಷ್ಟು 290 ಮಿಲಿಯ ಜನರು ಬಡತನ ರೇಖೆಗಿಂತಲೂ ಕೆಳಮಟ್ಟದಲ್ಲಿದ್ದಾರೆಂದೂ, ಶೇ 25 ರಷ್ಟು 158 ಮಿಲಿಯ ಅರೆಬಡವರಾಗಿರುವರೆಂದೂ ತಿಳಿಸಲಾಗಿದೆ. ಅಂದರೆ, ಶೇ 71 ರಷ್ಟು 448 ಮಿಲಿಯ ಜನರು ಬಡವರೂ ಅರೆ ಬಡವರೂ ಆಗಿದ್ದಾರೆಂದಾಯಿತು. 6 ನೇ ಯೋಜನೆಯ ಕೊನೆಯ ವರ್ಷ ಸಮೀಪಿಸುತ್ತಿರುವಾಗಲೂ ಪರಿಸ್ಥಿತಿಯಲ್ಲಿ ಏನೂ ಬದಲಾವಣೆಯಾದುದು ಕಂಡು ಬರುವುದಿಲ್ಲ. ಬದಲು, ಸಮಸ್ಯೆ ಇನ್ನಷ್ಟೂ ಗಂಭೀರವಾಗುತ್ತಿದೆ.

ಎಂದಿನಂತೆ ಈ ಸಲದ ಮುಂಗಡ ಪತ್ರದಲ್ಲಿಯೂ ನಿರುದ್ಯೋಗ, ಬಡತನದ ವಿರುದ್ಧ 20 ಅಂಶಗಳ ಆರ್ಥಿಕ ಕಾರ್ಯಕ್ರಮಗಳಿಗೆ, ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣ ಕಾಸು ಒದಗಿಸಲಾಗಿದೆ ! ಆದರೆ, ಈ ಕಾರ್ಯಕ್ರಮಗಳು ಕಾಗದದ ಮೇಲೆ ಉಳಿದಿವೆಯೇ ಹೊರತು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯಗತವಾಗಲಿಲ್ಲ. ಕಾರ್ಯಗತವಾದಲ್ಲೆಲ್ಲಾ ಕಾರ್ಯಕ್ರಮಗಳಿಗೆ ಒದಗಿಸಿದ ಹಣ ಹಾಗೂ ಆಹಾರ ಧಾನ್ಯಗಳ ಬಳಕೆಯಲ್ಲಿ ಸ್ವಜನ ಪಕ್ಷಪಾತ, ಅಕ್ರಮ ವ್ಯವಹಾರ, ಸುಳ್ಳು ಲೆಕ್ಕ, ಭ್ರಷ್ಟಾಚಾರ ವ್ಯಾಪಕವಾಗಿ ನಡೆದಿದೆಯೆಂದು ಕೇಂದ್ರ ಲೆಕ್ಕ ಪರಿಶೀಲನಾ ಸಮಿತಿ ವರದಿ ಮಾಡಿದೆ (1981-82) ಸ್ವಉದ್ಯೋಗಕ್ಕಾಗಿ ಇತ್ತೀಚೆಗೆ ಬಲಾತ್ಕಾರವಾಗಿ ಬ್ಯಾಂಕು ಸಾಲಗಳ ಮೇಳಗಳನ್ನು ನಡೆಸುತ್ತಿರುವುದು ಇಂದಿರಾ ಕಾಂಗ್ರೆಸ್‌ನ ಚುನಾವಣಾ ಪ್ರಚಾರ ಮಾಧ್ಯಮವಾಗುತ್ತಿದೆ. ದೇಶಾದ್ಯಂತ

(7ನೇ ಪುಟ ನೋಡಿ)

ಫೆದರ್ ಲೈಟ್ ಕಾರ್ಮಿಕರ ಹೋರಾಟ

ಬೆಂಗಳೂರಿನ ಮೈಸೂರು ರಸ್ತೆಯಲ್ಲಿರುವ ಫೆದರ್‌ಲೈಟ್ ಕಾರ್ಖಾನೆಯಲ್ಲಿ ಅಲ್ಯೂಮಿನಿಯಂ ಪೀಠೋಪಕರಣಗಳನ್ನು ತಯಾರಿಸುವ ಕಾಯಕದಲ್ಲಿ ಸುಮಾರು 200 ಕಾರ್ಮಿಕರಿದ್ದಾರೆ. ಅತ್ಯಂತ ಕಡಿಮೆ ಸಂಬಳ ಪಡೆದು ಮಾಲೀಕರಿಗೆ ಅಪಾರ ಲಾಭ ಸಂಪಾದಿಸಿ ಕೊಡುವ ಈ ಕಾರ್ಮಿಕರಿಗೆ ಸುಮಾರು 13 ವರ್ಷಗಳಿಂದ ಶೇ. 20 ಬೋನಸ್ ಕೊಡುತ್ತಿದ್ದ ಮಾಲೀಕರು 1982-83 ನೇ ಸಾಲಿಗೆ ಶೇ. 8·33 ಬೋನಸ್ ಮಾತ್ರವೇ ಕೊಡುವುದಾಗಿ ತಿಳಿಸಿದಾಗ ಕಾರ್ಮಿಕರು ತೀವ್ರ ಪ್ರತಿಭಟನೆ ನಡೆಸಿದರು. ಅದಕ್ಕೆ ಪ್ರತಿಯಾಗಿ ಮಾಲೀಕರು 50 ಕಾರ್ಮಿಕರನ್ನು ಕಾನೂನು ಬಾಹಿರವಾಗಿ ರಿಟ್ರೆಂಚ್ ಮಾಡಿದರು. ಸಿಐಟಿಯು.ಗೆ ಸೇರಿದ ಕಾರ್ಮಿಕರು ಇದರ ವಿರುದ್ಧವೂ ಪ್ರತಿಭಟಿಸಿ ಕಾರ್ಖಾನೆಯ ಎದುರು ಧರಣಿ ಕೂತರು. ರೊಚ್ಚಿಗೆದ್ದ ಮಾಲೀಕರು ಕಾರ್ಖಾನೆಯನ್ನು ಮುಚ್ಚಿಬಿಟ್ಟರು. ನಾಲ್ಕು ತಿಂಗಳುಗಳಿಂದ ಕಾರ್ಮಿಕರು ಶಾಂತಯುತ ಹೋರಾಟ ನಡೆಸುತ್ತಿದ್ದಾರೆ. ಕಾರ್ಮಿಕರ ಈ ಹೋರಾಟವನ್ನು ಬೆಂಬಲಿಸಬೇಕೆಂದು ಇಲ್ಲಿನ ಕಾರ್ಮಿಕ ಸಂಘದ ಪ್ರ. ಕಾರ್ಯದರ್ಶಿ ಕಾ. ಶ್ರೀನಿವಾಸ್ ಕಾರ್ಮಿಕ ಬಂಧುಗಳಿಗೂ ನಾಗರಿಕರಿಗೂ ವಿನಂತಿಸಿಕೊಂಡಿದ್ದಾರೆ.

ಅಸೋಸಿಯೇಟೆಡ್ ಡ್ರಗ್ಸ್- ಅಕ್ರಮ ಬೀಗಮುದ್ರೆ

ಬೆಂಗಳೂರಿನ ಮೈಸೂರು ರಸ್ತೆಯಲ್ಲಿ 15 ವರ್ಷಗಳ ಹಿಂದೆ ಸ್ಥಾಪಿಸಲಾದ ಅಸೋಸಿಯೇಟೆಡ್ ಡ್ರಗ್ ಕಂಪೆನಿಯಲ್ಲಿ 120 ಕಾರ್ಮಿಕರು ದುಡಿಯುತ್ತಿದ್ದು ಆರೇಳು ತಿಂಗಳುಗಳಿಂದ ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಮಾಲಿಕರನ್ನು ಒತ್ತಾಯಿಸುತ್ತಾ ಬಂದಿದ್ದರು. ಸಿಐಟಿಯು ಸಂಘವನ್ನು ತ್ಯಜಿಸಬೇಕೆಂದು ಕಾರ್ಮಿಕರಿಗೆ "ಬುದ್ಧಿವಾದ" ಹೇಳಿ ಶೋಷಿತ ಆಡಳಿತ ವರ್ಗ ದಮನಕಾರೀ ಕ್ರಮಗಳನ್ನು ಅನುಸರಿಸಿತು. ಲೇ-ಆಫ್ ಘೋಷಿಸುವುದು, ರಿಟ್ರೆಂಚ್ ಮಾಡುವುದು ನಡೆಯಿತು. ಕಾರ್ಮಿಕರು ಇವುಗಳನ್ನೆಲ್ಲಾ ಗಣನೆಗೆ ತೆಗೆದುಕೊಳ್ಳದೆ ಹೋರಾಟ ಮುಂದುವರಿಸಿದಾಗ 3·3·84 ರಿಂದ ಕಂಪೆನಿಯನ್ನು ಅಕ್ರಮವಾಗಿ ಮುಚ್ಚಲಾಯಿತು. ಈಗ ಇಲ್ಲಿನ ಕಾರ್ಮಿಕರು ಉಪವಾಸ ಅನುಭವಿಸುತ್ತಿದ್ದಾರೆ. ಕಾರ್ಮಿಕ ಸಂಗಾತಿಗಳೂ, ಸಾರ್ವಜನಿಕರೂ ಹೋರಾಡುತ್ತಿರುವ ಕಾರ್ಮಿಕರಿಗೆ ಸಹಾಯ ಮಾಡಬೇಕೆಂದು ಸಂಘವು ಕೇಳಿಕೊಂಡಿದೆ.

ಕ್ವಾಲಿಟಿ ಬಿಸ್ಕತ್ ಕಾರ್ಮಿಕರ ಹೋರಾಟ ಅಂತ್ಯ

ಬೆಂಗಳೂರಿನ ಮೈಸೂರು ರಸ್ತೆಯಲ್ಲಿರುವ ಕ್ವಾಲಿಟಿ ಬಿಸ್ಕತ್ ಕಾರ್ಖಾನೆಯ 300 ಕಾರ್ಮಿಕರು ಸಿಐಟಿಯುಗೆ ಸೇರಿದ್ದು ನಾಲ್ಕು ತಿಂಗಳುಗಳಿಂದ ಹೋರಾಟ ನಡೆಸುತ್ತಿದ್ದು ದಿನಾಂಕ. 21-3-84 ರಂದು ಕಾರ್ಮಿಕ ಮಂತ್ರಿಗಳ ಸಮ್ಮುಖದಲ್ಲಿ ಆದ ಒಪ್ಪಂದಕ್ಕೆ ಅನುಗುಣವಾಗಿ ಮುಷ್ಕರವನ್ನು ಮುಕ್ತಾಯಗೊಳಿಸಿದ್ದಾರೆ. ಸುಮಾರು 15 ವರ್ಷಗಳಿಂದ ಶೇ 20 ರಷ್ಟು ಬೋನಸ್ ಕೊಡುತ್ತಿದ್ದ ಮಾಲೀಕರು 1982-83 ನೇ ಸಾಲಿಗೆ ಇದ್ದಕ್ಕಿದ್ದಂತೆ 12·75 ಶೇ. ಬೋನಸ್ ಕೊಡುವುದಾಗಿ ತಿಳಿಸಿದ್ದೇ ಹೋರಾಟದ ಪ್ರಾರಂಭಕ್ಕೆ ಕಾರಣವಾಯಿತು.

ಮಾಲೀಕರ ಈ ಅನ್ಯಾಯವನ್ನು ಪ್ರತಿಭಟಿಸಿದ್ದಕ್ಕೆ ಮಾಲೀಕರು ಅಕ್ರಮ ಬೀಗಮುದ್ರೆ ಘೋಷಿಸಿದ್ದರು. ಕಾರ್ಮಿಕರಿಂದ ಮುಚ್ಚಳಿಕೆಯನ್ನು ಕೇಳಿದ್ದರು ಆದರೆ ಕಾರ್ಮಿಕರು ಇದಾವುದಕ್ಕೂ ಬಗ್ಗದೆ ನಡೆಸಿದ ಹೋರಾಟದ ಪರಿಣಾಮವಾಗಿ ಒಂದು ಒಪ್ಪಂದ ಮೂಡಿಬರಲು ಸಾಧ್ಯವಾಗಿದೆ. ಮುಚ್ಚಳಿಕೆ ಬರೆದು ಕೊಡದೆಯೇ ಕೆಲಸಕ್ಕೆ ಹಾಜರಾಗಲು ಸಾಧ್ಯವಾಗಿದೆ.

ಕೆಂಗೇರಿ ರೈತರ ಸಭೆ

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿಯಲ್ಲಿ 26-3-84 ರಂದು ಕರ್ನಾಟಕ ಪ್ರಾಂತ ರೈತ ಸಂಘದ ಬೆಂಗಳೂರು ಜಿಲ್ಲಾ ಸಮಿತಿಯ ಆದೇಶದ ಮೇರೆಗೆ ಕೆಂಗೇರಿ ಹೋಬಳಿ ರೈತ ಸಂಘದ ಮುಖ್ಯ ಕಾರ್ಯಕರ್ತರ ಸಭೆಯನ್ನು ಕರೆದು ರೈತರ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ಮತ್ತು 1984 ರ ರೈತ ಸಂಘದ ಸದಸ್ಯತ್ವವನ್ನು ಮತ್ತು ರೈತ ಸಂಘದ ನಿಧಿಯನ್ನು ಸಂಗ್ರಹಿಸಲು ಪ್ರತಿ ಹಳ್ಳಿಗಳಿಗೂ ಕಾರ್ಯಕರ್ತರು ಭೇಟಿಕೊಡುವುದೆಂದು ತೀರ್ಮಾನವಾಯಿತು. ಸಭೆಯ ಅಧ್ಯಕ್ಷತೆಯನ್ನು ರೈತ ಸಂಘದ ಮುಖಂಡರಾದ ನಾಗರಾಜ್ ವಹಿಸಿದ್ದರು. ಈ ಸಭೆಯನ್ನುದ್ದೇಶಿಸಿ, ಬೆಂಗಳೂರು ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾ. ಲಕ್ಕಣ್ಣನವರು ಮಾತಾಡಿದರು ಅನಂತರ ಕಾ. ವೆಂಕಟಾಚಲಯ್ಯ, ಕಾ. ಚನ್ನಪ್ಪ ಮಾಸ್ಟರ್ ತಿಮ್ಮಯ್ಯ, ಇವರುಗಳೂ ಸಹ ಮಾತನಾಡಿದರು.

ಕಾಳಮುದ್ದನದೊಡ್ಡಿ ಸಕ್ಕರೆ ಕಾರ್ಮಿಕರ ಹೋರಾಟಕ್ಕೆ ಜಯ

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕಾಳಮುದ್ದನ ದೊಡ್ಡಿಯಲ್ಲಿರುವ ಶ್ರೀ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ಕೆಲಸಗಾರರು ತಮ್ಮ ನ್ಯಾಯಯುತವಾದ ಹಕ್ಕಿಗಾಗಿ ಅಂದರೆ ಬರಬೇಕಾದ ಬಾಕಿ ತುಟ್ಟಿಭತ್ಯೆಕ್ಕಾಗಿ, ವೈದ್ಯಕೀಯ ಭತ್ಯಕ್ಕಾಗಿ ಸಮವಸ್ತ್ರಗಳಿಗಾಗಿ ಮತ್ತು ಉಗಾದಿ ಹಬ್ಬದ ಮುಂಗಡ ಹಣಕ್ಕಾಗಿ ತಾ. 16·3·84 ರಿಂದ ಸರದಿಧರಣಿ ಮುಷ್ಕರವನ್ನು ನಡೆಸ ಬೇಕಾಯಿತು. ಇದಕ್ಕೆ ಮುನ್ನ ಮಾಲೀಕ ವರ್ಗದೊಡನೆ ಮೇಲ್ಕಂಡ ಸೌಲಭ್ಯಗಳಿಗಾಗಿ ಚಾಮುಂಡೇಶ್ವರಿ ಷುಗರ್ ಮಿಲ್ಸ್, ಎಂಪ್ಲಾಯೀಸ್ ಅಸೋಸಿಯೇಷನ್ನಿನ ಪದಾಧಿಕಾರಿಗಳು ಸಂಧಾನ ನಡೆಸಿದರೂ ಈ ಸೌಲಭ್ಯಗಳ ಈಡೇರಿಕೆ ಸಾಧ್ಯವಾಗಲಿಲ್ಲ. ಸರದಿ ಧರಣಿ ಸತ್ಯಾಗ್ರಹ ಪ್ರಾರಂಭವಾದ ನಂತರ ಕಾರ್ಮಿಕರ ಒಗ್ಗಟ್ಟಿಗೆ ಮಾಲಿಕ ವರ್ಗ ಮಣಿದು ತಾ॥ 21·3·84 ರಂದು ಮಂಡ್ಯದ ಲೇಬರ್ ಆಫೀಸರವರ ಸಮ್ಮುಖದಲ್ಲಿ ಉಭಯ ಪಕ್ಷಗಳಿಗೂ ಮಾತುಕತೆ ನಡೆದು ಬಾಕಿ ತುಟ್ಟಿಭತ್ಯೆವನ್ನು ಹಾಗೂ ಉಗಾದಿ ಹಬ್ಬದ ಮುಂಗಡ ಹಣವನ್ನು ತಾ. 24·3·84 ರಂದು ಕೊಡುವುದಾಗಿಯೂ ಉಳಿದ ಸೌಲಭ್ಯದ ಮೊಬಲಗುಗಳನ್ನು ಕಬ್ಬು ಅರೆಯುವುದು ಪ್ರಾರಂಭವಾದ ಒಂದು ತಿಂಗಳೊಳಗೆ ಕೊಡುವುದಾಗಿಯೂ ಲಿಖಿತ ಒಪ್ಪಂದವಾದ ನಂತರ ಧರಣಿ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳಲಾಯಿತು ಕಾ. ಎಂ ಎಸ್. ಉಗ್ರಪ್ಪನವರು ಸಂಘದ ಕಾನೂನು ಸಲಹೆಗಾರರಾಗಿ ಈ ಹೋರಾಟಕ್ಕೆ ಮಾರ್ಗದರ್ಶನ ನೀಡಿದರು.

ರೈತರಿಂದ ಸತ್ಯಾಗ್ರಹ

ತಾ. 23·3·84 ರಂದು ಹೆಗ್ಗಡದೇವನ ಕೋಟೆಯಲ್ಲಿ ಸ್ಥಳೀಯ ತಹಸೀಲ್‌ದಾರ್‌ರವರ ಕಛೇರಿಯ ಮುಂದೆ ಕರ್ನಾಟಕ ಪ್ರಾಂತ ರೈತ ಸಂಘದ ಆಶ್ರಯದಲ್ಲಿ ಕೊಟ್ಟಿಗೆ ಎಡ ತೊರೆಗೆ ರಸ್ತೆ ಸಂಪರ್ಕಕ್ಕಾಗಿ, ಹನುಮಂತಪುರದ ಶಾಲೆಯ ವಿಸ್ತರಣೆಗಾಗಿ ಮತ್ತು ಪಡುವ ಕೋಟೆ, ಭೂದನೂರು ಗ್ರಾಮಗಳಲ್ಲಿ ಬಹಳಕಾಲದಿಂದಲೂ ಸಾಗುವಳಿ ಮಾಡಿಕೊಂಡು ಬರುತ್ತಿರುವ ರೈತರಿಗೆ ಸಾಗುವಳಿ ದಾಖಲಾತಿ ಪತ್ರಕ್ಕಾಗಿ ರೈತರು ಸತ್ಯಾಗ್ರಹ ನಡೆಸಿದರು. ಹೆಗ್ಗಡ ದೇವನ ಕೋಟೆ ತಾಲ್ಲೂಕು ಸಮಿತಿಯ ಮುಖಂಡರಾದ ಕಾ. ಸಿ. ನಟರಾಜ್, ಚಿನ್ನಸ್ವಾಮಿ ಹಾಗೂ ರೈತ ಮುಖಂಡರಾದ ಎಂ. ಎಸ್. ಉಗ್ರಪ್ಪ, ಪುರಂದಾಮನ್ ಮುಂತಾದವರು ತಹಸೀಲ್‌ದಾರರನ್ನು ಭೇಟಿಯಾಗಲು ಹೋದಾಗ ಅವರ ಕಛೇರಿಯಲ್ಲಿದ್ದ ಶಿರಸ್ತೇದಾರರು ಮೇಲಧಿಕಾರಿಗಳ ಸೂಚನೆಯಂತೆ ಮಾತುಕತೆ ನಡೆಸಿದರು. ರೈತರ ಸಮಸ್ಯೆಗಳನ್ನು ಕೇಳಿ ಅವುಗಳನ್ನು ಪರಿಹರಿಸುವುದಾಗಿಯೂ ಸಂಬಂಧ ಪಟ್ಟವರೊಡನೆ ಸಂಪರ್ಕ ಬೆಳೆಸಿ ಮನವಿಗೆ ಉತ್ತರ ಕೊಡುವುದಾಗಿಯೂ ತಿಳಿಸಿದರು. ನಂತರ ಮೇಲ್ಕಂಡ ಮುಖಂಡರು ರೈತರನ್ನುದ್ದೇಶಿಸಿ ಮಾತನಾಡಿದರು. ಸತ್ಯಾಗ್ರಹಕ್ಕೆ ಎರಡು ಮೂರು ದಿನದ ಹಿಂದೆ ಈ ಚಳುವಳಿಯ ಕರ ಪತ್ರವನ್ನು ಹಂಚುತ್ತಿದ್ದಾಗ ಅಲ್ಲಿಯ ರಾಜ್ಯ ರೈತ ಸಂಘದ ಮುಖಂಡರು ಅಡಚಣೆ ಮಾಡಿದ್ದರೂ ಈ ಸತ್ಯಾಗ್ರಹವನ್ನು ಬಿಡದೆ ನಡೆಸಿದುದು ರೈತ ಸಂಘದ ಶಕ್ತಿಯನ್ನು ಪ್ರಚುರಪಡಿಸುತ್ತದೆ.

ನ್ಯಾಯಾಧೀಶರ ನೇಮಕಾತಿಯ ಸಂವಿಧಾನ ಬದಲಾಗಲಿ

— ಕಾ. ರಾಮಣ್ಣ ರೈ

ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ನ್ಯಾಯಾಧೀಶರ ನೇಮಕಾತಿ ಹಾಗೂ ಬಡ್ತಿ ನೀಡುವಿಕೆಯನ್ನು ಪರಿಶೀಲಿಸಲು ಹೊಸ ಸಂವಿಧಾನ ಆಚರಣೆಗೆ ಬರಬೇಕೆಂದು ಲೋಕಸಭೆಯಲ್ಲಿ ಸಿಪಿಐ(ಎಂ) ಸದಸ್ಯ ಕಾ. ಎಂ. ರಾಮಣ್ಣರೈ ಅವರು ಒತ್ತಾಯಿಸಿದರು.

ಕಾನೂನು ಸಮಿತಿಗಳ ಕುರಿತಾದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುತ್ತಿದ್ದ ಕಾ. ರೈ ಅವರು ಈಗಿರುವ ಆಯ್ಕೆಯ ವಿಧಾನದಲ್ಲಿ ಪಕ್ಷಪಾತ ನಡೆಸಲು ಹಾಗೂ ರಾಜಕೀಯ ಆಟಗಳನ್ನು ನಡೆಸುವ ಅವಕಾಶವಿರುವುದರಿಂದ ಮತ್ತು ರಾಜಕೀಯ ಉದ್ದೇಶಗಳಿಗಾಗಿ ನ್ಯಾಯಾಧೀಶರನ್ನು ವರ್ಗಾಯಿಸುವ ಸಾಧ್ಯತೆಗಳಿರುವುದರಿಂದ, ಹೊಸ ಸಂವಿಧಾನವನ್ನು ಕಾರ್ಯರೂಪಕ್ಕೆ ತರಬೇಕೆಂದು ಕಾ. ರಾಮಣ್ಣರೈ ಒತ್ತಾಯಿಸಿದ್ದಾರೆ.

ಅಲ್ಲದೆ ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳಲ್ಲಿ ಹೆಚ್ಚಿನ ನ್ಯಾಯಾಧೀಶರನ್ನು ನೇಮಕ ಮಾಡಬೇಕೆಂದು ಹಾಗೂ ಹೈಕೋರ್ಟ್‌ಗಳಲ್ಲಿ ಹೆಚ್ಚಿನ ಬೆಂಚುಗಳನ್ನು ಸ್ಥಾಪಿಸಬೇಕೆಂದೂ ಇದರಿಂದ ಇತ್ಯರ್ಥವಾಗದೆ ಉಳಿದಿರುವ ಕೇಸುಗಳನ್ನು ತೀರ್ಮಾನ ಮಾಡಲು ಅನುಕೂಲವಾಗುತ್ತದೆಂದು ತಿಳಿಸಿದರು.

ರೈತರೇ ಇದೋ ಇಲ್ಲಿ ನೋಡಿರಿ !

(2ನೇ ಪುಟದಿಂದ)

ಕರುಣಾಕರನ್ ಮಂತ್ರಿಮಂಡಲದಲ್ಲಿದ್ದ ಜೋಸೆಫ್ ಗುಂಪಿನವರ ಬೆಂಬಲಿಗರೂ ಈ ರೀತಿ ಆಕ್ರಮಣ ಮಾಡಿದವರಲ್ಲಿ ಬಹಳ ಜನರಿರುವುದರಿಂದ, ಅಂಥವರನ್ನು ಒಕ್ಕಲೆಬ್ಬಿಸದೆ ಅವರಿಗೆ ಪಟ್ಟಾ ಕೊಡಬೇಕೆಂದು ಕೇಳುತ್ತ ಬಂದಿದ್ದರು. ಆದರೆ ಕೇಂದ್ರ ಸರಕಾರ ಅದಕ್ಕೆ ಒಪ್ಪಿರಲಿಲ್ಲ. ಜೋಸೆಫ್ ಗುಂಪಿನ 7 ಶಾಸಕರು ತಮ್ಮ ಬೆಂಬಲವನ್ನು ವಾಪಸ್ ಪಡೆಯುತ್ತೇವೆಂದು ಬೆದರಿಸಿದಾಗ, ಕರುಣಾಕರನ್ ಅವರು ಜೋಸೆಫ್ ಗುಂಪಿನ ಹಟಮಾರಿ ತನದ ಕುರಿತು ಇಂದಿರಾ ಗಾಂಧಿಯವರಿಗೆ ತಿಳಿಸಿ ಹೇಳಿ ತನ್ನನ್ನು ರಕ್ಷಿಸಬೇಕೆಂದು ದುಂಬಾಲು ಬಿದ್ದರು. ಕಂದಾಯ ಬೋರ್ಡಿನ ಸದಸ್ಯ ಬ್ರಹ್ಮಚಾರಿಯಾ ಮೆಥ್ಯು ಅವರು ದಿಲ್ಲಿಗೆ ಹಾರಿ ಕೇಂದ್ರದ ಒಕ್ಕಲುತನ ಮಂತ್ರಿ ರಾವ್ ಬೀರೇಂದ್ರಸಿಂಗ್ ಅವರಿಂದ ಒಂದು ಪತ್ರ ತಂದಿದ್ದಾರೆ. ಸಮಸ್ಯೆಗಳನ್ನು ಪರಿಶೀಲಿಸಿ ಕೇಂದ್ರಕ್ಕೆ ವರದಿ ಸಲ್ಲಿಸಬೇಕೆಂದು ಅನಂತರ ಪಟ್ಟಾ ಕೊಡಲಾಗುವುದೆಂದೂ ತಿಳಿಸಿದ್ದಾರೆ. ದಕ್ಷಿಣ ಭಾರತದ ಒಂದೇ ಒಂದು ಕಾಂಗ್ರೆಸ್ ಮಂತ್ರಿಮಂಡಲ ತಾತ್ಕಾಲಿಕ ಜೀವದಾನ ಪಡೆದಂತಾಗಿದೆ. ಆದರೆ ರೈತರಿಗೆ ಜೀವದಾನ ಮಾತ್ರ ಎಂದೋ ತಿಳಿದಿಲ್ಲ.

ತನ್ನ ಮಂತ್ರಿಮಂಡಲ ಉಳಿಸುವ ಸಲುವಾಗಿ ಇಂದಿರಾ ಗಾಂಧಿ ಕೇರಳದಲ್ಲಿ ಅರಣ್ಯ ಭೂಮಿ ಆಕ್ರಮಣ ಮಾಡಿದವರಿಗೆ ಪಟ್ಟಾ ಕೊಡಬಹುದೆಂದು ತಿಳಿಸಿದ್ದಾಳೆ. ಈ ಸದವಕಾಶವನ್ನು ಕರ್ನಾಟಕದ ರೈತರೂ ಉಪಯೋಗಿಸಿಕೊಳ್ಳಬೇಕು. ಬಳ್ಳಾರಿ ಜಿಲ್ಲೆಯ ಹರಪನ ಹಳ್ಳಿ ತಾಲೂಕು, ಬಿಜಾಪುರ ಮತ್ತಿನ್ನಿತರ ಜಿಲ್ಲೆಗಳಲ್ಲಿ ನಮ್ಮ ಸಾವಿರಾರು ರೈತರು ಅರಣ್ಯ ಭೂಮಿ ಹೊಂದಿದವರಿದ್ದಾರೆ. ಹರಪನ ಹಳ್ಳಿಯ ಸುತ್ತ ಮುತ್ತಲ ಹಳ್ಳಿಗಳ ರೈತರ ಮೇಲೆ ಹೆಗಡೆ ಸರಕಾರ ಖಟ್ಲೆ ಹಾಕಿದೆ. ಕೇರಳದಲ್ಲಿ ಅರಣ್ಯ ಆಕ್ರಮಣ ಮಾಡಿದವರಿಗೆ ಪಟ್ಟಾ ಸಿಗುವಾಗ ನಮ್ಮವರಿಗೂ ಸಿಗಲೇಬೇಕು. ರೈತ ಸಂಘ ಈ ಪ್ರಶ್ನೆಯನ್ನೆತ್ತಿ ಹಿಡಿದು ಹೋರಾಟ ಮುಂದುವರಿಸಲಿ.

ಪ್ರಕಟನೆ

ಕೆ. ಆರ್. ಚಂದ್ರನ್ ಎಂಬುವರು ನಮ್ಮ ಪಕ್ಷದ ಸೋಮವಾರಪೇಟೆ ಘಟಕದ ಹೆಸರಿನ ಲೆಟರ್‌ಹೆಡ್ ಮತ್ತು ರಸೀತಿಗಳನ್ನು ಉಪಯೋಗಿಸಿ ಹಣ ಸಂಗ್ರಹ ಮಾಡಿರುವುದು ನಮ್ಮ ಗಮನಕ್ಕೆ ಬಂದಿರುತ್ತದೆ. ಈ ವ್ಯಕ್ತಿಯು ನಮ್ಮ ಪಕ್ಷದ ಸದಸ್ಯನಲ್ಲವೆಂದೂ, ಮತ್ತು ಈ ವ್ಯಕ್ತಿಗೆ ಪಕ್ಷಕ್ಕಾಗಿ ಹಣ ಸಂಗ್ರಹಿಸಲು ಅಧಿಕಾರ ಕೊಟ್ಟಿಲ್ಲವೆಂದೂ ಈ ಮೂಲಕ ಸ್ಪಷ್ಟಪಡಿಸುತ್ತೇವೆ.

(ಪಿ. ರಾಮಚಂದ್ರರಾವ್)
ಕಾರ್ಯದರ್ಶಿ

ಎ. ಕೆ. ಜಿ. ಮತ್ತು ಎಡ ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆ

(4ನೇ ಪುಟದಿಂದ)

ಕೊನೆಯ ದಿನಗಳಲ್ಲಿ ತುರ್ತುಪರಿಸ್ಥಿತಿಗೆ ಸಾಕ್ಷಿಯಾದರು. (ಈ ಭಾಗ ಅವರ ಆತ್ಮಕಥೆಯಲ್ಲಿಲ್ಲ. ಅವರ ಆತ್ಮಕಥೆ 1971ಕ್ಕೆ ಮುಗಿಯುತ್ತದೆ) [ತುರ್ತು ಪರಿಸ್ಥಿತಿಯ ದಿನಗಳಲ್ಲಿ ಅವರ ಚಟುವಟಿಕೆಗಳಲ್ಲಿ ನೇರವಾಗಿ ಭಾಗವಹಿಸಿದ ನಾನು ಎ.ಕೆ.ಜಿ. ಯವರು ಇಂದಿರಾ ಗಾಂಧಿಯವರ ಸೋಲನ್ನು ಊಹಿಸಿದ್ದರೆಂಬುದನ್ನು ಮತ್ತು ಜನಪರ ಮತ್ತು ಪ್ರಜಾಸತ್ತಾತ್ಮಕ ನೀತಿಗಳನ್ನು ಅನುಸರಿಸುವ ಸರ್ಕಾರವೊಂದನ್ನು ಕೇಂದ್ರದಲ್ಲಿ ರಚಿಸಬಹುದೆಂಬ ಆಶಾಭಾವನೆ ಉಳ್ಳವರಾಗಿದ್ದರೆಂದು ಧೈರ್ಯವಾಗಿ ಹೇಳಬಹುದು. ಆದರೆ ಈ ಗುರಿ ಇನ್ನೂ ಸಾಧ್ಯವಾಗಿಲ್ಲ. ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರವನ್ನು ಕಿತ್ತೊಗೆದ ದಿನವೇ ಅವರು ಕೊನೆಯುಸಿರೆಳೆದರೆಂಬುದು ಅವರ ಜೀವನದ ಚೋದ್ಯ ಸಂಗತಿಯಾಗಿದೆ.

ಈ ಭಾಗವನ್ನು ಮುಗಿಸುವ ಮುನ್ನ ಇತರ ಕೆಲವು ವ್ಯಕ್ತಿಗಳಿಗೆ ನೋವುಂಟುಮಾಡಬಾರದೆಂಬುದನ್ನು ಮನಗಂಡಿದ್ದೇನೆ. ಆದರೆ ಅದು ಉದ್ದೇಶಪೂರಿತವಲ್ಲ. ಯಾರು ತಮ್ಮ ಹಿಂದಿನ ನಡವಳಿಕೆಯನ್ನು ಸ್ವಯಂ ವಿಮರ್ಶೆ ಮಾಡಿಕೊಳ್ಳುತ್ತಾರೊ, ಯಾರು ತಮ್ಮ ತಪ್ಪುಗಳ ಜವಾಬುದಾರಿಯನ್ನು ಹೊತ್ತು ಭವಿಷ್ಯದಲ್ಲಿ ಸರಿಯಾದ ನೀತಿಯನ್ನು ಅನುಸರಿಸುತ್ತಾರೊ ಅವರೇ ನಿಜವಾದ ಕಮ್ಯುನಿಸ್ಟರು. ಎ.ಕೆ.ಜಿ ಯವರ ಪಕ್ಷ ಸ್ವಯಂ ವಿಮರ್ಶೆಯನ್ನು ಮಾಡಿಕೊಳ್ಳುವುದರಲ್ಲಿ ಎಂದೂ ಹಿಂದಾಗಲಿಲ್ಲ. ತುರ್ತುಪರಿಸ್ಥಿತಿಯಲ್ಲಿ ಇನ್ನೂ ಎಕೆಜಿ ಯವರು ಜೀವಂತವಿರುವಾಗಲೇ ಸೆಕ್ಟೇರಿಯನ್ ಧೋರಣೆಗಳನ್ನು ವಿಮರ್ಶಿಸಿಕೊಂಡಿತು ಮತ್ತು ಜಲಂಧರನ ಏಪ್ರಿಲ್ 1978ರ ಹತ್ತನೇ ಸಮ್ಮೇಳನದಲ್ಲಿ ಹೊಸ ಧೋರಣೆಯನ್ನು ರೂಪಿಸಿಕೊಂಡಿತು.

ಜಲಂದರ್ ಸಮ್ಮೇಳನದ ವಿಮರ್ಶನಾ ವರದಿ

ಹತ್ತನೇ ಸಮ್ಮೇಳನದಲ್ಲಿ 1971ರಲ್ಲಿ ಮಧುರೆಯಲ್ಲಿ ಅಂಗೀಕೃತವಾದ ರಾಜಕೀಯ ತಂತ್ರಗಳ ಬಗೆಗಿನ ಧೋರಣೆಗಳನ್ನು ಕಾರ್ಯಗತಗೊಳಿಸುವಾಗ ಸಂಭವಿಸಿದ ದೋಷಗಳನ್ನು ವಿಮರ್ಶಿಸುವ ವರದಿಯನ್ನು ಮಂಡಿಸಲಾಯಿತು. 9ನೇ ಸಮ್ಮೇಳನದಲ್ಲಿ 1971ರಲ್ಲಿನ ಕಾಂಗ್ರೆಸ್ ಪಕ್ಷದ ವಿಜಯವನ್ನು ಮತ್ತು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳಮೇಲೆ ಹೂಡಿದ ರಾಜಕೀಯ ಧಾಳಿಯನ್ನು ಗುರುತಿಸಲಾಗಿತ್ತು. 1966-69ರ ಮಧ್ಯೆ ಸಾಧಿಸಲಾಗಿದ್ದ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯನ್ನು ಮುರಿಯುವುದರಲ್ಲಿ ಕಾಂಗ್ರೆಸ್ ಜಯಗಳಿಸಿತು. ಕೇರಳ ಮತ್ತು ಪಶ್ಚಿಮ ಬಂಗಾಳಗಳ ಎಡ ಒಲವಿನ ರಾಜ್ಯ ಸರಕಾರಗಳನ್ನುರುಳಿಸಿತು.

ಈ ಸಂದರ್ಭದಲ್ಲಿ ಸಿ.ಪಿ.ಐ. ಕಾಂಗ್ರೆಸ್ ಜೊತೆಯಲ್ಲಿ ಹೋದರೆ, ಸಮಾಜವಾದಿಗಳು "ಮಹಾ ಮೈತ್ರಿ"ಯ ಜೊತೆ ಸೇರಿದರು. ಇಂದಿರಾ ಗಾಂಧಿಯವರು ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷವನ್ನು ಬೇರೆ ಮಾಡಿ ಧಾಳಿ ಮಾಡಿಸಲು ಸುಲಭವಾಯಿತು. ಪಶ್ಚಿಮ ಬಂಗಾಳದಲ್ಲಿ ಅರೆ ಫ್ಯಾಸಿಸ್ಟ್ ದಬ್ಬಾಳಿಕೆಯನ್ನು ಪ್ರಾರಂಭಿಸಿದರು. 9ನೇ ಸಮ್ಮೇಳನದ ವರದಿ, ಆಳುವ ಕಾಂಗ್ರೆಸ್ ಪಕ್ಷನೊಳಗಿನ ಸರ್ವಾಧಿಕಾರೀ ಅಂಶಗಳು ಸಿ.ಪಿ.ಐ. (ಎಂ)ಗೆ ಮಾತ್ರವಲ್ಲ ಎಲ್ಲ ಪ್ರಜಾಸತ್ತಾತ್ಮಕ ಪಕ್ಷಗಳ ಉಳಿವಿಗೇ ಅಪಾಯಕರ. ಯಾರು ಸಂವಿಧಾನದಲ್ಲಿ ನಂಬಿಕೆಯನ್ನಿಟ್ಟಿದ್ದಾರೋ, ಯಾರು ಪಾರ್ಲಿಮೆಂಟರಿ ಮಾರ್ಗವನ್ನು ನಂಬುತ್ತಾರೋ ಅವರೆಲ್ಲರೂ ಕಾಂಗ್ರೆಸ್ ಆಳ್ವಿಕೆಯಲ್ಲಿ ಮತದಾನದ ಹಕ್ಕು ಸೇರಿ ಯಾವ ಸಂವಿಧಾನಿಕ ಸ್ವಾತಂತ್ರ್ಯಗಳೂ ಕ್ಷೇಮವಲ್ಲದೆಂಬುದನ್ನು ಅರಿಯುತ್ತಿದ್ದಾರೆ ಎಂದು ಸ್ಪಷ್ಟಪಡಿಸಿತು. 9ನೇ ಸಮ್ಮೇಳನದ ಕರ್ತವ್ಯ ವರ್ಗ ಮತ್ತು ಸಾಮೂಹಿಕ ಹೋರಾಟಗಳಲ್ಲಿ ಐಕ್ಯ ಕಾರ್ಯಾಚರಣೆಯನ್ನು ಸಾರುವುದೇ ಆಗಿತ್ತು. ನಮ್ಮ ಪಕ್ಷ ಆರ್ಥಿಕ ಪರಿಸ್ಥಿತಿಯ ವಾಸ್ತವವನ್ನು ಜನಸಮೂಹಗಳ ಮನಸ್ಸನ್ನು ಜೊತೆಗೆ ಆಳುವ ಪಕ್ಷದ ತಂತ್ರಗಳನ್ನು ಅರ್ಥ ಮಾಡಿಕೊಳ್ಳಬೇಕು. ನಿರಂತರವಾಗಿ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಗ್ಗೂಡಿಸಿ ಆಳುವ ವರ್ಗದ ವಿರುದ್ಧ ಐಕ್ಯ ಹೋರಾಟಗಳನ್ನು ನಡೆಸಬೇಕು. ಈ ಮೂಲಕ ಪ್ರಜಾಸತ್ತಾತ್ಮಕ ಚಳುವಳಿಯ ಮುಂಚೂಣಿಯ ರಕ್ಷಕರನ್ನು ನಾಶ ಮಾಡುವ ಸಂಚನ್ನು ಸೋಲಿಸಬೇಕು ಎಂದು ಆ ಸಮ್ಮೇಳನ ಕರೆ ಕೊಟ್ಟಿತ್ತು.

ಜಲಂಧರ್ ಸಮ್ಮೇಳನದ ವಿಮರ್ಶಾ ವರದಿ ಈ ಕರ್ತವ್ಯಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಆಗಿರುವ ತಪ್ಪುಗಳನ್ನು ಗುರುತಿಸಿತು. ಎಡಪಂಥವಾದಿ ದೃಷ್ಟಿಕೋನವು ನಮ್ಮನ್ನು ಕುರುಡು ಮಾಡಿದೆ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯನ್ನು ರೂಢಿಸುವ ಕರ್ತವ್ಯದಲ್ಲಿ ಲೋಪವಾಗಲು ಕಾರಣವಾಗಿದೆ.

ತುರ್ತು ಪರಿಸ್ಥಿತಿಯ ನಂತರದ ಬೆಳವಣಿಗೆಗಳು ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳಲು ಸಹಾಯ ಮಾಡಿತ್ತು. ತುರ್ತುಪರಿಸ್ಥಿತಿ ನಂತರದ ಕಾಲದಲ್ಲಿ ನಾವು ಇತರ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಜೊತೆ ಗೂಡಿ ನಡೆಸಿದ ಐಕ್ಯಕಾರ್ಯಾಚರಣೆ ಮತ್ತು ಸಾಮೂಹಿಕ ಹೋರಾಟಗಳು ಮತ್ತು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯನ್ನು ಕಡಿಸಲು ಸಾಧ್ಯವಾಗಿದೆ.

ಎಡ ಮತ್ತು ಪ್ರಜಾಸತ್ತಾತ್ಮಕ ರಂಗ-ಒಂದು ಹೋರಾಟದ ರಂಗ

ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದ ಒಂದು ಸಂಗತಿ-ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ಕೇವಲ ಒಂದು ಚುನಾವಣಾ ಒಪ್ಪಂದವಲ್ಲ. ಎಡ ಮತ್ತು ಪ್ರಜಾಸತ್ತಾತ್ಮಕ ರಂಗವೆಂದರೆ ಸಾಮಾಜಿಕ ಬದಲಾವಣೆಗಾಗಿ ಹೋರಾಡುವ ಜನರ ಐಕ್ಯತೆಯನ್ನು ಸಾಧಿಸುವ, ಅವರನ್ನು ಸಂಘಟಿಸುವ, ರಾಷ್ಟ್ರೀಯ ಆಂದೋಳನಾ ಸಮಿತಿಯ, ರೈತರ, ಯುವಕರ, ವಿದ್ಯಾರ್ಥಿಗಳ, ಮತ್ತು ಮಹಿಳೆಯರ ಚಳುವಳಿಗಳಲ್ಲಿ ವ್ಯಕ್ತವಾಗಿರುವಂತೆ ಸಾಮೂಹಿಕ ಕಾರ್ಯಾಚರಣೆಯನ್ನು ಪ್ರಾರಂಭಿಸುವುದು. ವಿರೋಧ ಪಕ್ಷಗಳ ಸಮಾವೇಶಗಳು ಮತ್ತು ಕಾರ್ಯಕ್ರಮಗಳು ಯುದ್ಧ ವಿರೋಧಿ ಚಳುವಳಿ ಕೂಡ ಇದರ ಒಂದು "ಭಾಗ". ಹಾಗೆಂದ ಮಾತ್ರಕ್ಕೆ ಪಶ್ಚಿಮ ಬಂಗಾಳ, ತ್ರಿಪುರಾ ಸರ್ಕಾರಗಳ, ಕೇರಳದ ನಾಯನಾರ್ ಸರ್ಕಾರವನ್ನು ಇಚ್ಛಿಸುವುದು, ರಕ್ಷಿಸುವುದು ಮತ್ತು ಜನಪರ ನೀತಿಗಳನ್ನು ಕಾರ್ಯರೂಪಕ್ಕೆ ತರುವುದನ್ನು ಕಡೆಗಣಿಸಬೇಕು ಎಂದಲ್ಲ. ಅಷ್ಟೇ ಅಲ್ಲ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯ ಕಾರ್ಯಾಚರಣೆ ಕರ್ನಾಟಕ, ಆಂಧ್ರಪ್ರದೇಶ, ಕಾಶ್ಮೀರಗಳ ಸರ್ವಾಧಿಕಾರಿ ವಿರೋಧಿ ಸರ್ಕಾರವನ್ನು ರಕ್ಷಿಸುವ ಚಳುವಳಿಯೂ ಸೇರುತ್ತದೆ.

ಎಡ ಮತ್ತು ಪ್ರಜಾಸತ್ತಾತ್ಮಕ ರಂಗ-ಒಂದು ಸಂಕ್ರಮಣ ಕಾಲದ ವೇದಿಕೆ

ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಪರಿಕಲ್ಪನೆ ನಮ್ಮ ಪಕ್ಷದ ಕಾರ್ಯಕ್ರಮದ ತಿರುಳಿನಿಂದಲೇ ಮೂಡಿದ್ದು. ಕಾರ್ಮಿಕ ರೈತರ ಸತ್ಯತೆಯೇ ಬೆನ್ನೆಲುಬಾಗಿರುವ, ಎಲ್ಲ ದೇಶಪ್ರೇಮಿ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಕ್ರಾಂತಿಕಾರಿ ಐಕ್ಯದ ಮೂಲಕ ಜನತಾ ಪ್ರಜಾಪ್ರಭುತ, ಕ್ರಾಂತಿಯ ಉದ್ದೇಶಗಳನ್ನು ಸಾಧಿಸಲು ನಡೆಸುವ ಹೋರಾಟವು ಗುರುತರವಾದದ್ದೂ, ದೀರ್ಘಾವಧಿಯದ್ದೂ ಆಗಿದೆ. ಹೊಸ-ಹೊಸ ಪರಿಸ್ಥಿತಿಯಲ್ಲಿ, ವಿವಿಧ ಹಂತಗಳಲ್ಲಿ, ಈ ಹೋರಾಟವನ್ನು ನಡೆಸಬೇಕಾಗಿದೆ. ಈ ಕ್ರಾಂತಿಕಾರಿ ಚಳುವಳಿಯ ಪ್ರತ್ಯೇಕ ಹಂತದಲ್ಲಿ, ವಿವಿಧ ವರ್ಗಗಳು, ಒಂದೇ ವರ್ಗದೊಳಗಿನ ವಿವಿಧ ಗುಂಪುಗಳು, ಬೇರೆ ಬೇರೆ ನಿಲುವು ವಹಿಸುವುದು ಖಂಡಿತ. ಈ ರೀತಿ ವಿವಿಧ ವರ್ಗಗಳು ಮತ್ತು ಅವುಗಳೊಳಗಿನ ಗುಂಪುಗಳು ಆಗಾಗ್ಗೆ ಸ್ಥಾನಪಲ್ಲಟನೆ ಹೊಂದುವುದರಿಂದ ಉಂಟಾಗುವ ವೈವಿಧ್ಯತೆಗಳು, ಕ್ರಾಂತಿಕಾರಿ ಕಾರ್ಮಿಕ ವರ್ಗದ ಮುಂದಳುವಾಗಬಲ್ಲ ಕಮ್ಯೂನಿಸ್ಟ್ ಪಕ್ಷವನ್ನು ಕಟ್ಟಿ,

ಶ್ಯಕತೆಯನ್ನೂ, ಮಹತ್ವವನ್ನೂ ಒತ್ತಿ ಹೇಳುತ್ತವೆ.

ತೀವ್ರ ಬದಲಾಗುತ್ತಿರುವ ರಾಜಕೀಯ ಪರಿಸ್ಥಿತಿಯ ಅವಶ್ಯಕತೆಗಳನ್ನು ಪೂರೈಸಲು ನಮ್ಮ ಪಕ್ಷವು ಬಗೆಬಗೆಯ ಮಧ್ಯಂತರ ಘೋಷಣೆಗಳನ್ನು ಕೊಡಬೇಕಾಗುವುದು ಸಹಜ. ಪ್ರಸ್ತುತ ಆಳುವ ವರ್ಗಗಳನ್ನು ಅಧಿಕಾರದಿಂದ ಕಿತ್ತೊಗೆದು ರೈತ-ಕಾರ್ಮಿಕ ವರ್ಗ ಸಖ್ಯತೆಯ ಮೇಲೆ ಆಧಾರಿತ ಹೊಸ ಪ್ರಜಾಸತ್ತಾತ್ಮಕ ಪ್ರಭುತ್ವ ಹಾಗೂ ಸರಕಾರವನ್ನು ಸ್ಥಾಪಿಸುವ ಗುರಿಯನ್ನು ಜನರ ಮುಂದಿಡುವಾಗಲೇ, ನಮ್ಮ ಪಕ್ಷವು ಜನತೆಗೆ ತುರ್ತು ಪರಿಹಾರ ನೀಡಬಲ್ಲ, ಪರಿಶುದ್ಧವಾದ ಕಾರ್ಯಕ್ರಮವನ್ನು ಜಾರಿಗೊಳಿಸುವ ವಾಗ್ದಾನವಿತ್ತ ಸರಕಾರವನ್ನು ಸ್ಥಾಪಿಸಲು ಎಲ್ಲ ಅವಕಾಶಗಳನ್ನು ಉಪಯೋಗಿಸುವುದು. ಜನರನ್ನು ಸಂಘಟಿಸಲು, ಪ್ರತಿಯೊಂದು ಘಟ್ಟದಲ್ಲಿ ಮಧ್ಯಕಾಲದ ಘೋಷಣೆ ಮತ್ತು ವೇದಿಕೆಗಳನ್ನು ಕಟ್ಟಬೇಕು. ಇವೆಲ್ಲ, ಹಲವಾರು ಹೋರಾಟಗಳ ನಂತರ ಹಂತ-ಹಂತವಾಗಿ, ಸಾವಧಾನವಾಗಿ, ರಚಿತವಾಗುವ ಜನತಾ ಪ್ರಜಾಪ್ರಭುತ್ವ ರಂಗದತ್ತ ಕೊಂಡೊಯ್ಯಲು ನಡೆಸಿದ ಸಿದ್ಧತೆಗಳಾಗಿವೆ.

ಕಾ. ಎ.ಕೆ.ಜಿ. ಯವರ ಜೀವನ ಮತ್ತು ಹೋರಾಟ ಮತ್ತು ಅವರ ಪಕ್ಷ ಇದನ್ನು ಸಾಧಿಸಿ ತೋರಿಸಿತು.

ಈ ಆದರ್ಶಗಳನ್ನು ಯಶಸ್ವಿಯಾಗಿ ಕಾರ್ಯಾಚರಣೆಗೆ ತರಲು ಮತ್ತು ಪ್ರಚಂಡ ವಿಜಯವನ್ನು ಗಳಿಸಲು ನಮ್ಮ ನೆಚ್ಚಿನ ನಾಯಕರಾದ ಕಾ. ಎ.ಕೆ.ಜಿ. ಯವರ ಸ್ಮರಣ ದಿನವಾದ ಇಂದು ನಾವೆಲ್ಲರೂ ಪಣ ತೊಡೋಣ.

★

ಕಣ್ಣೊರೆಸುವ ಕಸರತ್ತು

(5ನೇ ಪುಟದಿಂದ)

ಇದರ ವಿರುದ್ಧ ಕಟು ಟೀಕೆಗಳು ಬರುತ್ತಿವೆ.

ಬದಲಾಗದ ಆರ್ಥಿಕ ಧೋರಣೆ

ವರ್ಷ ವರ್ಷಕ್ಕೂ ಹೆಚ್ಚುತ್ತಿರುವ ಅಪ್ರತ್ಯಕ್ಷ ತೆರಿಗೆ, ಕೊರತೆ ಹಣಸೃಷ್ಟಿ ದೇಶ ವಿದೇಶ ಸಾಲದ ಹೊರೆ, ಆನಿಯಂತ್ರಿತ ಆಡಳಿತ ವೆಚ್ಚ, ತೆರಿಗೆಗಳ್ಳತನ ಮತ್ತು ಕಪ್ಪು ಹಣ, ಬಂಡವಾಳಶಾಹಿಗಳ ಭೂಮಾಲಕರ ಪರವಾದ ಅಭಿವೃದ್ಧಿ ವೆಚ್ಚ ಮತ್ತು ಅವರ ಅಪಾರ ಲಾಭಗಳಿಕೆ ಹಾಗೂ ಆಸ್ತಿ ಸಂಚಯ, ಆಡಳಿತ ನಿರ್ದೇಶನಗಳ ಮೂಲಕ ಅವಶ್ಯಕ ವಸ್ತುಗಳ ಬೆಲೆ ಏರಿಕೆ, ವ್ಯಾಪಕ ಭ್ರಷ್ಟಾಚಾರ, ಇವುಗಳಿಂದ ಬೆಲೆ ಏರಿಕೆ, ಹಣದುಬ್ಬರ ನಿರುದ್ಯೋಗ, ಬಡತನ ಸಮಸ್ಯೆಗಳು ಭುಗಿಲೇಳುವುವು. ಇವುಗಳನ್ನು ಇಂದಿರಾ ಸರಕಾರ ನಿಯಂ[illegible] ಅವತ್ರಿಸಲು ಪ್ರಯತ್ನಿಸುವುದೇ ಇಲ್ಲ. ಬೆಲೆ ಏರಿಕೆ ಸ್ವಲ್ಪ ಮಟ್ಟಿಗಾದರೂ ತಡೆಯಲು ಕನಿಷ್ಠ 14 ಜೀವನಾವಶ್ಯಕ ವಸ್ತುಗಳನ್ನಾದರೂ ದೇಶಾದ್ಯಂತ 2·93 ಲಕ್ಷ ನ್ಯಾಯ ಬೆಲೆ ಅಂಗಡಿಗಳ ಮೂಲಕ ಸಾರ್ವಜನಿಕ ವಿತರಣಾ ವ್ಯವಸ್ಥೆ ಮಾಡಬೇಕೆಂಬ ವಿರೋಧ ಪಕ್ಷಗಳ ಸಲಹೆಯನ್ನೂ ತಿರಸ್ಕರಿಸಿದೆ !

ಕೆಲವೊಮ್ಮೆ ಕೇಂದ್ರ ಅರ್ಥ ಮಂತ್ರಿ ಪ್ರಣಬಕುಮಾರ್ ಮುಖರ್ಜಿ ಯವರು ಬೆಲೆ ಏರಿಕೆ-ಹಣದುಬ್ಬರ ಸಮಸ್ಯೆ ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕ ವ್ಯವಸ್ಥೆಯಲ್ಲಿ ಅನಿವಾರ್ಯ ಎಂದೂ ಸಮರ್ಥಿಸುತ್ತಾರೆ ! ಪ್ರಧಾನಿ ಇಂದಿರಾ ಗಾಂಧಿಯೂ ಹಣದುಬ್ಬರವು ಜಾಗತಿಕ ಸಮಸ್ಯೆ ಎಂದು ತನ್ನ ಸರಕಾರದ ಜವಾಬ್ದಾರಿಯನ್ನು ಜಾರಿಸಿ ಬಿಡುತ್ತಾರೆ ! ಅಂದರೆ ಈ ವ್ಯವಸ್ಥೆಯಲ್ಲಿ ಶ್ರೀಮಂತರು ಮತ್ತಷ್ಟೂ ಶ್ರೀಮಂತರಾಗುವುದು ಬಡವರು ಇನ್ನಷ್ಟು ಬಡವರಾಗುವುದೂ ಅನಿವಾರ್ಯ; ಅಲ್ಲ, ಅದೇ ಮುಖ್ಯೋದ್ದೇಶ !

ಹತ್ತಿ ಬೆಳೆಗಾರರ ಹಿತಾಸಕ್ತಿಗಳ ರಕ್ಷಣೆಗೆ ಕಾ. ಸಮರ್ ಮುಖರ್ಜಿರವರ ಒತ್ತಾಯ

ಇತ್ತೀಚೆಗೆ ಕರ್ನಾಟಕದಲ್ಲಿ ಹತ್ತಿಯ ಬೆಲೆ ಹಠಾತ್ತನೆ ಕಡಿಮೆಯಾದಾಗ ಕರ್ನಾಟಕ ಪ್ರಾಂತ ರೈತ ಸಂಘದ ಬೆಳಗಾವಿ ಜಿಲ್ಲಾ ಸಮಿತಿಯ ಆಶ್ರಯದಲ್ಲಿ ರೈತರು ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದರು. ಒಕ್ಕಲುತನ, ಹುಟ್ಟುವಳಿ, ಮಾರುಕಟ್ಟೆಯಲ್ಲಿ ಟೆಂಡರ್ ಪ್ರಕಟಣೆಯನ್ನು ನಿಲ್ಲಿಸಿ ಮಾರುಕಟ್ಟೆಯ ಕಾರ್ಯಕಲಾಪಗಳನ್ನು ಸ್ಥಗಿತಗೊಳಿಸಲಾಗಿತ್ತು. ಕೇಂದ್ರ ಮತ್ತು ರಾಜ್ಯಸರ್ಕಾರಗಳ ಮಂತ್ರಿಗಳಿಗೆ ತಂತಿಗಳನ್ನು ಕಳುಹಿಸಿ ಹತ್ತಿಬೆಳೆಗಾರರಿಗಾಗುವ ಅನ್ಯಾಯಗಳನ್ನು ತಡೆಗಟ್ಟಲು ಒತ್ತಾಯಿಸಲಾಗಿತ್ತು.

ಸಂಸತ್ತಿನಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಗುಂಪಿನ ನಾಯಕರಾದ ಕಾ. ಸಮರ್ ಮುಖರ್ಜಿಯವರಿಗೂ ತಂತಿಯೊಂದನ್ನು ಕಳುಹಿಸಲಾಗಿತ್ತು. ಅವರು ಕೂಡಲೇ ಪ್ರಧಾನ ಮಂತ್ರಿ, ಕೃಷಿ ಮಂತ್ರಿ ಹಾಗೂ ವಾಣಿಜ್ಯ ಮಂತ್ರಿಗಳನ್ನು ಸಂಪರ್ಕಿಸಿ ಕರ್ನಾಟಕದ ಹತ್ತಿ ಬೆಳೆಗಾರರ ಹಿತಾಸಕ್ತಿಗಳನ್ನು ರಕ್ಷಿಸಲು ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹಪಡಿಸಿದರು. ಈ ಬಗ್ಗೆ ಪ್ರಧಾನ ಮಂತ್ರಿ ಇಂದಿರಾಗಾಂಧಿ ಹಾಗೂ ಕೃಷಿ ಮಂತ್ರಿ ರಾವ್ ಬೀರೇಂದ್ರಸಿಂಗ್ ಕಾ. ಸಮರ್ ಮುಖರ್ಜಿಯವರಿಗೆ ಪತ್ರ ಬರೆದು ಹತ್ತಿ ಬೆಲೆ ಕುಸಿತವನ್ನು ತಡೆಗಟ್ಟಲು ಕ್ರಮ ಕೈಗೊಳ್ಳುವುದಾಗಿ ಭರವಸೆನೀಡಿದ್ದಾರೆ. ಈಗ ಮಾರುಕಟ್ಟೆಯಲ್ಲಿ ಹತ್ತಿಗೆ ತೃಪ್ತಿಕರವಾದ ಬೆಲೆ ದೊರಕುತ್ತಿದ್ದು ಸಮಯೋಚಿತ ನೆರವು ನೀಡಿದ ಕಾ. ಸಮರ್ ಮುಖರ್ಜಿಯವರಿಗೆ ಕರ್ನಾಟಕ ಪ್ರಾಂತ ರೈತ ಸಂಘದ ಬೆಳಗಾವಿ ಜಿಲ್ಲಾ ಸಮಿತಿ ತನ್ನ ಕೃತಜ್ಞತೆಗಳನ್ನು ಸಲ್ಲಿಸಿದೆ ಎಂದು ಜಿಲ್ಲಾ ಕಾರ್ಯದರ್ಶಿ ಕಾ. ನಿತ್ಯಾನಂದಜೀ ತಿಳಿಸಿದ್ದಾರೆ.

ಕೇರಳ ವಿದ್ಯುಚ್ಛಕ್ತಿ ನೌಕರರ ಹೋರಾಟ

ಕಳೆದ ಒಂದು ತಿಂಗಳಿಂದ ಕೇರಳದ ವಿದ್ಯುಚ್ಛಕ್ತಿ ನೌಕರರು ತಮ್ಮ ಬೇಡಿಕೆಗಳಿಗಾಗಿ ಧೀರ ಹೋರಾಟವನ್ನು ನಡೆಸುತ್ತಿದ್ದಾರೆ. 1983 ರಲ್ಲಿ ವೇತನ ಮತ್ತಿತರ ವಿಷಯಗಳ ಕುರಿತು ಆಗಿದ್ದ ಒಪ್ಪಂದವನ್ನು ಜಾರಿ ಮಾಡಬೇಕೆಂದು ಒತ್ತಾಯಿಸಿ ನೌಕರರ ಸಂಘಗಳು ಹಲವಾರು ಬಾರಿ ಮನವಿ ಮಾಡಿಕೊಂಡಿದ್ದರೂ ಕೂಡ ಕೇರಳದ ಕರುಣಾಕರನ್ ಸರಕಾರ ಈ ಬಗ್ಗೆ ನಿರ್ಲಕ್ಷ್ಯದಿಂದಿತ್ತು. ಸರಕಾರದ ಈ ಮನೋಭಾವನ್ನು ಪ್ರತಿಭಟಿಸಿ ಒಂದು ತಿಂಗಳ ಹಿಂದೆ ನೌಕರರು ಮುಷ್ಕರ ಪ್ರಾರಂಭಿಸಿದರು. ಸಂಘಗಳ ಜೊತೆ ಮಾತುಕತೆ ನಡೆಸುವುದಿಲ್ಲವೆಂಬ ಅಹಂಕಾರದ ಧೋರಣೆಯನ್ನು ಸರಕಾರ ಪ್ರದರ್ಶಿಸಿದೆ. ಇದಕ್ಕೆ ಸರಕಾರ ಕೊಡುವ ಕಾರಣ 1983 ರ ಒಪ್ಪಂದಗಳನ್ನು ಜಾರಿಗೆ ತರಲಾಗಿದೆ ಎಂಬ ವಾದ, ಬೇಕಿದ್ದರೆ ಈ ಬಗ್ಗೆ ಪರಿಶೀಲಿಸಲು ಆಯೋಗವನ್ನು ರಚಿಸುವ ಸೂಚನೆ. ಆದರೆ ಇದಕ್ಕೆ ನೌಕರರ ಸಂಘ ನಿರಾಕರಿಸಿ ತಮಗೆ ಆಯೋಗ ಬೇಕಿಲ್ಲವೆಂದೂ ತಮ್ಮೊಂದಿಗೆ ಚರ್ಚಿಸಿ ಸಮಸ್ಯೆಯನ್ನು ಬಗೆ ಹರಿಸಬೇಕೆಂದು ತಿಳಿಸಿದೆ.

ಸರ್ಕಾರ ಇದಕ್ಕೆ ಒಪ್ಪದೆ ಮುಷ್ಕರ ನಿರತ ಕಾರ್ಮಿಕರನ್ನು ದಮನ ಮಾಡಲು ಮಿಲಿಟರಿಯನ್ನು ಉಪಯೋಗಿಸುತ್ತಿದೆ.

ಸರ್ಕಾರದ ಈ ಧೋರಣೆಯನ್ನು ಪ್ರತಿಭಟಿಸಿ ಹೋರಾಡುತ್ತಿರುವ ನೌಕರರಿಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಬೇಕೆಂದು ಜನತೆಗೂ, ಕಾರ್ಮಿಕ ಸಂಘಟನೆಗಳಿಗೂ ಕೇರಳದ ಮಾಜೀ ಮುಖ್ಯಮಂತ್ರಿ, ಸಿಪಿಐ (ಎಂ) ನಾಯಕರಾದ ಕಾ. ಇ. ಕೆ. ನಾಯನಾರ್ ಕರೆ ನೀಡಿದ್ದಾರೆ.

ಮುಷ್ಕರದಿಂದ ಜನ ಸಾಮಾನ್ಯರಿಗೆ ಆಗುತ್ತಿರುವ ಅನಾನುಕೂಲತೆಯನ್ನು ತಪ್ಪಿಸಲು, ಕಾರ್ಮಿಕರ ನ್ಯಾಯಯುತ ಬೇಡಿಕೆಗಳನ್ನು ಸರ್ಕಾರ ಕೂಡಲೇ ಈಡೇರಿಸಬೇಕೆಂದು ಎಡ ಮತ್ತು ಪ್ರಜಾಪ್ರಭುತ್ವ ರಾಜಕೀಯ ಪಕ್ಷಗಳು ಸರ್ಕಾರವನ್ನು ಒತ್ತಾಯಿಸಿವೆ.

ಏ. 1ರಿ ರಂದು ನವದೆಹಲಿಯಲ್ಲಿ ಅಖಿಲಭಾರತ ವಿದ್ಯುಚ್ಛಕ್ತಿ ನೌಕರರ ಫೆಡರೇಶನ್ ಪಾರ್ಲಿಮೆಂಟಿನ ಎದುರು ಪ್ರತಿಭಟನಾ ಪ್ರದರ್ಶನ ನಡೆಸುವುದಾಗಿ ಪ್ರಕಟಿಸಿದೆ.

ಬಾಹ್ಯಾಕಾಶದಲ್ಲಿ ಭಾರತೀಯ

ಭಾರತ-ರಶ್ಯ ಜಂಟೀ ಬಾಹ್ಯಾಕಾಶ ಯಾನ ಸೋಯುಜ್-11 ಗಗನ ನೌಕೆಯಲ್ಲಿ ಏಪ್ರಿಲ್ 3 ರಂದು ಪ್ರಾರಂಭಗೊಂಡಿತು. ಅಂತರಿಕ್ಷವನ್ನು ಪ್ರವೇಶಿಸಿರುವ ಪ್ರಮುಖ ರಾಷ್ಟ್ರಗಳ ಸಾಲಿಗೆ ಭಾರತವನ್ನು ಸೇರಿಸಿರುವುದಕ್ಕಾಗಿ ಸೋವಿಯತ್ ದೇಶವನ್ನು ನಾವು ಅಭಿನಂದಿಸಬೇಕಾಗಿದೆ. ಸೋವಿಯತ್ ರಷ್ಯಾದ ಸಹಕಾರವಿಲ್ಲದೆ ಇಂಥದೊಂದು ಸಾಹಸ ನಡೆಸುವುದು ತುಂಬಾ ಕಷ್ಟದ ಕಾರ್ಯವೆಂಬುದು ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ.

ಭಾರತದ ಬಾಹ್ಯಾಕಾಶ ಸಂಶೋಧನೆಗಳಲ್ಲೇ ಇದೊಂದು ಮಹತ್ವದ ಮೈಲಿಗಲ್ಲು. ನಮ್ಮ ಭೂಮಂಡಲವನ್ನ ಭಾರತೀಯನೊಬ್ಬ ಪ್ರಥಮ ಬಾರಿಗೆ ವೀಕ್ಷಿಸುವುದು ನಿಜಕ್ಕೂ ಒಂದು ರೋಮಾಂಚಕಾರೀ ಅನುಭವ.

ಇಲ್ಲಿನವರೆಗೆ ಭೂಮಂಡಲದ ಮಟ್ಟಿಗಿದ್ದ ಭಾರತ-ಸೋವಿಯತ್ ಮೈತ್ರಿ ಭಾರತೀಯ ಖೇಚರನನ್ನು ಬಾಹ್ಯಾಕಾಶಕ್ಕೆ ಕಳಿಸುವುದರೊಂದಿಗೆ ಸೀಮಾತೀತವಾಗಿ ಬೆಳೆದಿರುವುದು ತುಂಬಾ ಸಂತೋಷದಾಯಕ ವಿಚಾರ.

ಸೋವಿಯತ್ ದೇಶ ಇದುವರೆಗೆ ಪೂರ್ವ ಯೂರೋಪಿನ ಸಮಾಜವಾದಿ ದೇಶಗಳ ಖೇಚರರನ್ನೂ ವಿಯಟ್ನಾಂ, ಕ್ಯೂಬಾ ಮುಂತಾದ ದೇಶಗಳ ಗಗನಗಾಮಿಗಳನ್ನು ಬಾಹ್ಯಾಕಾಶಕ್ಕೆ ಕಳಿಸಿದ್ದನ್ನು ನಾವಿಲ್ಲಿ ಸ್ಮರಿಸಬಹುದಾಗಿದೆ.

ಸೋವಿಯತ್ ದೇಶವು ಕಳೆದ ಎರಡು ದಶಕಗಳಿಂದ ಬಾಹ್ಯಾಕಾಶ ಸಂಶೋಧನೆಯಲ್ಲಿ ಭಾರತಕ್ಕೆ ಸಹಾಯ ಮಾಡುತ್ತಿದೆ. 1961 ರ ಏಪ್ರಿಲ್ 12 ರಂದು ಭೂಮಿಯ ಸುತ್ತ ಐತಿಹಾಸಿಕ ಅಂತರಿಕ್ಷ ಯಾನ ನಡೆಸಿದ ಪ್ರಥಮ ಮಾನವ ಸೋವಿಯತ್ ದೇಶದ ಯೂರಿಗಗಾರಿನ್. ಈತ ಅದೇ ವರ್ಷದ ನವೆಂಬರ್‌ನಲ್ಲಿ ಭಾರತಕ್ಕೆ ಭೇಟಿ ನೀಡಿದ್ದಾಗ "ಭಾರತೀಯ ಗಗನಗಾಮಿಯೊಬ್ಬ ಬಾಹ್ಯಾಕಾಶ ಪ್ರವೇಶಿಸುವ ದಿನ ಬಂದೇ ಬರುತ್ತದೆ" ಎಂಬ ಭರವಸೆಯ ನುಡಿ ಕೊನೆಗೂ ನಿಜವಾಗಿ ಬಿಟ್ಟಿತು.

1982 ರ ಸಪ್ಟೆಂಬರ್‌ನಿಂದಲೇ ಕಠಿಣ ತರಬೇತಿಯನ್ನು ಪ್ರಾರಂಭಿಸಿದ ಇಬ್ಬರು ಭಾರತೀಯ ವ್ಯೋಮಯಾನಿಗಳಾದ ರವೀಶ್ ಮಲ್ಹೋತ್ರ, ಹಾಗೂ ರಾಕೇಶ ಶರ್ಮ ಅವರುಗಳಲ್ಲಿ ಪ್ರಥಮ ಭಾರತೀಯ ಅಂತರಿಕ್ಷ ಯಾತ್ರಿಯಾಗುವ ಅದೃಷ್ಟ ಲಭಿಸಿದ್ದು ರಾಕೇಶ್ ಶರ್ಮ ಅವರಿಗೆ. ರವೀಶ್ ಮಲ್ಹೋತ್ರ ಅವರು ಬದಲಿ ತಂಡದಲ್ಲಿದ್ದು ಕೊನೆಗಳಿಗೆಯಲ್ಲೇನಾದರೂ ಹೆಚ್ಚು ಕಡಿಮೆಯಾಗಿದ್ದ ಪಕ್ಷದಲ್ಲಿ ರವೀಶ್ ಹೋಗಬೇಕಾಗಿತ್ತು.

ನಕ್ಷತ್ರ ಲೋಕಕ್ಕೆ ಹಾರುವ ಮನುಷ್ಯನ ಅಖಂಡ ಪ್ರಯತ್ನಗಳ ಸಂಕೇತವಾದ ಆಕಾಶದಲ್ಲಿ ಚಲಿಸುತ್ತಿರುವ ಸೂರ್ಯರಥ, ಅದರ ಮೇಲೆ ಸೋವಿಯತ್ ದೇಶ ಹಾಗೂ ಭಾರತದ ಧ್ವಜಗಳಿರುವ ಲಾಂಛನವನ್ನು ಧರಿಸಿದ ಮೂವರು ಗಗನ ಗಾಮಿಗಳು (ಇಬ್ಬರು ಸೋವಿಯತ್ ದೇಶದವರು) 6.8 ಟನ್ ಭಾರದ ಸೋಯುಜ್-11 ಗಗನ ನೌಕೆಯ ಮೂಲಕ ಈಗಾಗಲೇ ಬಾಹ್ಯಾಕಾಶದಲ್ಲಿರುವ ಅಂತರಿಕ್ಷ ಸಂಶೋಧನಾ ಪ್ರಯೋಗಾಲಯ ಸೆಲ್ಯೂಟ್ 7ನ್ನು ಯಶಸ್ವಿಯಾಗಿ ಸೇರಿ ಪ್ರಯೋಗಗಳನ್ನು ಆರಂಭಿಸಿದ್ದಾರೆ. 7 ದಿನಗಳ ಕಾಲ ನಡೆಯುವ ಸಂಶೋಧನೆಗಳು ಯಶಸ್ವಿಯಾಗಲೆಂದೂ ನಂತರ ಸುಗಮವಾಗಿ ಭೂಮಿಗೆ ಹಿಂದಿರುಗಲೆಂದೂ ಹಾರೈಸೋಣ.

—"ಉದಯ"

ಕಾ. ಸೂರಿಯವರಿಂದ ಉಪವಾಸ ಸತ್ಯಾಗ್ರಹ

(1ನೇ ಪುಟದಿಂದ)

ಈಗಲೂ ಸಹ ಮಾಲೀಕರ, ಜಮೀನುದಾರರ ಒತ್ತಡಕ್ಕೆ ಮಣಿಯದೆ 26 ಕೈಗಾರಿಕೆಗಳಲ್ಲಿ ಕನಿಷ್ಠ ಕೂಲಿ ಪ್ರಕಟಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಮೈಸೂರಿನ ಮೆಷಿನರಿ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ ನುರಿತ ಕಾರ್ಮಿಕರನ್ನು "ಟ್ರೈನಿ" ಎಂದು ಹೆಸರಿಸಿ ಕೇವಲ 300ರೂ.ಗೆ ದುಡಿಸಿಕೊಳ್ಳುತ್ತಿದ್ದಾರೆ. ಇದರ ವಿರುದ್ಧ 1983 ರಿಂದ ಕಾರ್ಮಿಕರು ಹೋರಾಟ ಮಾಡುತ್ತಿದ್ದಾರೆ. ಸುಮಾರು ಎರಡು ನೂರು ಜನ ಕಾರ್ಮಿಕರು ಮೈಸೂರಿನಿಂದ ಜಾಥಾದಲ್ಲಿ ಬಂದು ಮುಖ್ಯಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಿದ್ದರು. ಕಾರ್ಮಿಕ ಸಚಿವ ಅಜೀಜ್ ಸೇಠ್ರ ಮಾಲೀಕ ಪರ ಧೋರಣೆಯಿಂದಾಗಿ ಈ ಸಮಸ್ಯೆ ಬಗೆಹರಿಯದೆ ಕಾರ್ಮಿಕರು ಉಪವಾಸಕ್ಕೆ ಬೀಳುವಂತಾಗಿದೆ. ಹೆಚ್ಚಿನ ಜವಾಬುದಾರಿ ಹೊತ್ತಿರುವ ಮುಖ್ಯ ಮಂತ್ರಿಗಳಿಗೆ ಈ ಕಾರ್ಮಿಕರಿಗೆ ಕೊಟ್ಟ ಆಶ್ವಾಸನೆಯನ್ನು ಕೃತಿಗಿಳಿಸಬೇಕೆಂಬುದು ಮರೆತು ಹೋದಂತೆ ಕಾಣುತ್ತದೆ. ಸರ್ಕಾರ ಈ ಕೂಡಲೇ ಈ ಅಡೇಕ ವರ್ಗದವರನ್ನು ಕರೆಸಿ ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸುವ ಕ್ರಮ ಕೈಗೊಳ್ಳಬೇಕು.

ಬೆಂಗಳೂರಿನಲ್ಲಿ ಮೈಸೂರು ರಸ್ತೆಯಲ್ಲಿರುವ ಅಸೋಸಿಯೆಟ್ ಡ್ರಗ್ ಕಂಪನಿಯ ಕಾರ್ಮಿಕರು ಸಂಘ ಮಾಡಿದಕ್ಕೇ ಕಾರ್ಖಾನೆಯನ್ನು ಮುಚ್ಚಿದ್ದಾರೆ. ಅದೇ ರೀತಿ ಹೊಡಿ ರಸ್ತೆಯಲ್ಲಿರುವ ವೈಕಾನ್ ಕಾರ್ಮಿಕರು ಹೆಚ್ಚಿನ ಬೋನಸ್ ಕೇಳಿದ್ದಕ್ಕೆ ಯಂತ್ರಗಳ ಭಾಗಗಳನ್ನು ಬಿಚ್ಚಿ ಪಂಜಾಬಿನಲ್ಲಿ ಜೋಡಿಸುತ್ತಿದ್ದಾರೆ. ಸರ್ಕಾರದ ಕೈಗಾರಿಕಾ ಇಲಾಖೆ ಈ ಕಾರ್ಖಾನೆಗಳನ್ನು ತೆರೆಯಿಸಿ ಉದ್ಯೋಗವನ್ನು ಕೊಡಿಸುವುದರಲ್ಲಿ ವಿಫಲವಾಗಿದೆ.

ಮೈಸೂರು ರಸ್ತೆ ಮತ್ತು ಹೊಡಿ ರಸ್ತೆಯ ಅನೇಕ ಕಾರ್ಖಾನೆಯ ಕಾರ್ಮಿಕರ ಹೋರಾಟಗಳನ್ನು ಸರ್ಕಾರ ಶೀಘ್ರ ರೀತಿಯಲ್ಲಿ ಬಗೆಹರಿಸುತ್ತಿಲ್ಲ. ಇದರ ಕಾರಣಗಳಲ್ಲಿ ಒಂದು ಕಾರ್ಮಿಕ ಸಚಿವರಾದ ಅಜೀಜ್ ಸೇಠ್‌ರವರ ಸಿಐಟಿಯು ವಿರೋಧಿ ನೀತಿ ಸಹಾ ಆಗಿದೆ. ಈ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕೆಂದು ಜನವರಿ 30 ರಂದು ಮೈಸೂರು ರಸ್ತೆ ಮತ್ತು ಹೊಡಿ ರಸ್ತೆಯಲ್ಲಿರುವ ಕಾರ್ಮಿಕರು ಒಂದು ದಿನದ ಮುಷ್ಕರ ನಡೆಸಿದರು.

ಈ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಬೇಕು ಮತ್ತು ಶ್ರದ್ಧೆವಹಿಸಿ ಕೆಲಸ ಮಾಡುವ ಕಾರ್ಮಿಕ ಮಂತ್ರಿ ಬೇಕು. ಸರಕಾರದ ಹಿಂದಿನ ಪೋಲೀಸು ನೀತಿ ಸಹ ಬದಲಾಗಬೇಕು.

ಕೇಂದ್ರ ಸರ್ಕಾರ ಬಂದರು ಕಾರ್ಮಿಕರ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಿ ಬಂದರು ಕೆಲಸ ಪ್ರಾರಂಭವಾಗುವಂತೆ ಮಾಡುವ ಬದಲು ಅವರ ಮುಷ್ಕರ ಮುರಿಯಲು ನೌಕಾಪಡೆಯನ್ನು ಬಳಸಿದ್ದನ್ನು ಸಿಐಟಿಯು ವಿರೋಧಿಸುತ್ತದೆ. ಕೇಂದ್ರ ಸರ್ಕಾರ ತನ್ನ ಕಾರ್ಮಿಕ ವಿರೋಧಿ ನೀತಿಯನ್ನು ಕೈಬಿಟ್ಟು ಕೂಡಲೇ ಅವರ ಬೇಡಿಕೆಯನ್ನು ಈಡೇರಿಸಬೇಕೆಂದು ಒತ್ತಾಯ ಮಾಡುತ್ತದೆ.

ಹೋರಾಟ ಅನಿವಾರ್ಯ

(1ನೇ ಪುಟದಿಂದ)

ಈ ದಿಸೆಯಲ್ಲಿ ಕಾನೂನು ಬದಲಾವಣೆ ಆಗಿಲ್ಲ. ಎಲ್ಲ ಬಡ ಜನರ ಸ್ವಾಧೀನವಿರುವ ಸರಕಾರಿ ಭೂಮಿಯನ್ನು ಅದು ಎಲ್ಲೆ ಇದ್ದರೂ ಖಾಯಂ ಗೊಳಿಸುವಂತಹ ಸ್ಪಷ್ಟ ತೀರ್ಮಾನವನ್ನು ಮಾಡಿಲ್ಲ. ಭೂ ನ್ಯಾಯ ಮಂಡಳಿ, ಭೂವಿತರಣಾ ಸಮಿತಿ ಮೊದಲಾದುವುಗಳಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಇತರೆ ರೈತ ಸಂಘಗಳ ಪ್ರತಿನಿಧಿಗಳನ್ನು ಸೇರಿಸುವ ಬದಲು ಬಹುತೇಕ ಸ್ಥಾಪಿತ ಹಿತಾಸಕ್ತಿಗಳನ್ನೇ ತುಂಬಲಾಗಿದೆ.

1983 ಮಾರ್ಚ್ ಮೊದಲಲ್ಲೆ ನಲುವತ್ತು ಬೇಡಿಕೆಗಳ ಮನವಿಯನ್ನು ಕರ್ನಾಟಕ ಪ್ರಾಂತ ರೈತ ಸಂಘವು ಮುಖ್ಯಮಂತ್ರಿಗಳಿಗೆ ಕೊಟ್ಟಿತ್ತು. ಆದರೆ ಅವೇಲೆ ಒಮ್ಮೆಯಾದರೂ ಅವುಗಳ ಬಗ್ಗೆ ಸರಕಾರ ಮಾತುಕತೆ ನಡೆಸಿಲ್ಲ. ಪ್ರತಿಕ್ರಿಯೆಯನ್ನೇ ಸೂಚಿಸಿಲ್ಲ. ಈಗಲಾದರೂ ಸರಕಾರವು ಎಲ್ಲಾ ರೈತ ಸಂಘಗಳ ಪ್ರತಿನಿಧಿಗಳನ್ನು ಮಾತುಕತೆಗೆ ಕರೆದಿರುವುದು ಸ್ವಾಗತಾರ್ಹ. ಆದರೆ ಮುಖ್ಯಮಂತ್ರಿಯವರು ಮಾತುಕತೆಗೆ ಕರೆದಿರುವುದು ಕೇವಲ ಔಪಚಾರಿಕವಾಗಿಯೇ ಉಳಿಯಬಾರದು. ರೈತ ಸಂಘಗಳು ಮುಂದಿಡುವ ಪ್ರಶ್ನೆಗಳನ್ನು ಗಂಭೀರವಾಗಿ ಪರಿಗಣಿಸಿ ತನ್ನ ಅಧಿಕಾರ ವ್ಯಾಪ್ತಿಯೊಳಗೆ ಸಾಧ್ಯವಿರುವ ಎಲ್ಲಾ ಪರಿಹಾರಗಳನ್ನೂ ತುರ್ತಾಗಿ ಒದಗಿಸಲು ಸರಕಾರ ಮುಂದಾಗಬೇಕು. ರುದ್ರಪ್ಪನವರ ರೈತ ಸಂಘದವರು ಮುಂದಿಟ್ಟಿದ್ದ ಬೇಡಿಕೆಗಳಲ್ಲಿ ಕೆಲವು, ಅಂದರೆ ಒತ್ತುವರಿ ಭೂಮಿಯನ್ನು ಖಾಯಂ ಗೊಳಿಸುವ ಪ್ರಶ್ನೆ, ಭೂ ಛಿದ್ರೀಕರಣ ಕಾಯ್ದೆ ರದ್ದು ಮಾಡುವ ಪ್ರಶ್ನೆ ಮೊದಲಾದವುಗಳು ಎಲ್ಲಾ ರೈತ ಸಂಘಗಳ ಪ್ರಶ್ನೆಯಾಗಿವೆ. ಇಂಥಹ ಪ್ರಶ್ನೆಗಳಿಗೆ ಪರಿಹಾರ ಒದಗಿಸುವ ಆಶ್ವಾಸನೆ ಇತ್ತರೆ ಸಾಲದು— ಈ ದಿಸೆಯಲ್ಲಿ ಕಾನೂನುರೀತ್ಯಾ ನಿರ್ದಿಷ್ಟ ಕ್ರಮ ತೆಗೆದುಕೊಳ್ಳಬೇಕು.

ಹಳ್ಳಿಯ ಜನತೆಯ ಮೂಲಭೂತ ಸಮಸ್ಯೆಗಳು ಹೆಚ್ಚುತ್ತಲೇ ಇರುವುದರಿಂದ ಅತೃಪ್ತಿಯೂ ಹೆಚ್ಚುತ್ತಲಿದೆ ಎಂದು ಸರಕಾರ ತಿಳಿದಿರಬೇಕು. ರುದ್ರಪ್ಪ ಮತ್ತು ಅವರ ಸಂಗಡಿಗರ ತಪ್ಪು ನೀತಿಗಳನ್ನು ಬಹುತೇಕ ರೈತಾಪಿ ಜನ ಒಪ್ಪಿಲ್ಲವಾದರೂ ಸರಕಾರವು ಹಳ್ಳಿಯ ಜನರ ಸಮಸ್ಯೆಗಳ ಬಗ್ಗೆ ಔದಾಸೀನ್ಯ ಮನೋಭಾವನೆ ತಾಳಿದರೆ ಈ ಜನತೆ ಸುಮ್ಮನಿರಲಾರರು ಎಂದೂ ಸರಕಾರ ತಿಳಿದಿರಬೇಕು. ಮಾತುಕತೆಯ ಮೂಲಕ ಸಮಸ್ಯೆಗಳಿಗೆ ಪರಿಹಾರ ಸಿಗುವ ಆಸೆಯನ್ನು ವ್ಯಕ್ತಪಡಿಸುವಾಗಲೇ ಸಂಘಟಿತ ಹೋರಾಟದ ಮೂಲಕ ಸರಕಾರದ ಮೇಲೆ ಒತ್ತಾಯ ತರಲು ಕರ್ನಾಟಕ ಪ್ರಾಂತ ರೈತ ಸಂಘವು ಮುಂದಾಗುತ್ತಲಿದೆ ಎಂದೂ ಸರಕಾರವು ತಿಳಿದಿರಬೇಕು. ಮುಖ್ಯಮಂತ್ರಿಯವರೊಂದಿಗೆ ಮಾತನಾಡಿ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಮುಂದಾಗುತ್ತಿರುವಾಗಲೇ ಸ್ವತಂತ್ರವಾಗಿಯೂ, ಜಂಟೀಯಾಗಿಯೂ ಚಳುವಳಿಗಳನ್ನು ನಡೆಸಲೂ ಕರ್ನಾಟಕ ಪ್ರಾಂತ ರೈತ ಸಂಘವು ಮಾರ್ಚ್ 25 ರಂದು, ಸೇರಿದ ರಾಜ್ಯ ಸಮಿತಿ ಸಭೆಯಲ್ಲಿ ತೀರ್ಮಾನಿಸಿದೆ. ಸರಕಾರವು ರೈತರ ಹಾಗೂ ಹಳ್ಳಿಯ ಬಡವರ ತುರ್ತು ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸಿ ಪರಿಹಾರ ಒದಗಿಸಲು ಮುಂದಾಗದಿದ್ದಲ್ಲಿ ಹೋರಾಟವು ಅನಿವಾರ್ಯ ಎಂದು ಕರ್ನಾಟಕ ಪ್ರಾಂತ ರೈತ ಸಂಘವು ಸ್ಪಷ್ಟ ಪಡಿಸುತ್ತದೆ.

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore-560053. Editorial and managerial office, L-56, K V. Temple Street, Sultanpet, B-53. Phone : 24154
Editor : P. Ramachandra Rao
Managing Editor : N. K. Upadhyaya